ಕಲ್ಯಾಣ ಕಿರಣ

ಅಕ್ಟೋಬರ್
ನವೆಂಬರ್-2012

ಬೆಲೆ-20ರೂ





ವಸತಿ ಸಚಿವ ಶರಣ. ವಿ. ಸೋಮಣ್ಣ ಅವರಿಂದ 11ನೆಯ ಕಲ್ಯಾಣ ಪರ್ವ ಉದ್ಘಾಟನೆ. 27-10-2012



ಮಹಿಳಾ ಗೋಷ್ಠಿಯ ಉದ್ಘಾಟನೆ ಶರಣೆ. ಮಂಜುಳಾ ನಾಯ್ಡು ಅವರಿಂದ. ಮತ್ತು ಡಾ॥ ವಿಜಯಲಕ್ಷ್ಮಿ ಬಾಳೇಕುಂದ್ರಿ.



ಪೂಜ್ಯ ಶ್ರೀ ಜಗದ್ಗುರು ಬಸವ ಪ್ರಭು ಸ್ವಾಮೀಜಿಯವರಿಂದ ಧರ್ಮಚಿಂತನ ಗೋಷ್ಠಿಯ ಉದ್ಘಾಟನೆ. ಚಿತ್ರದಲ್ಲಿ ಪೂಜ್ಯ ಶ್ರೀ ನಿಜಗುಣಾನಂದ ಸ್ವಾಮೀಜಿ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ಸಂಪುಟ-42	ಬಸವ ಶಕೆ -879	ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-10-11	ಅಕ್ಟೋಬರ್-ನವೆಂಬರ್-2012	ವಾರ್ಷಿಕ ಚಂದಾ 200 ರೂ.

ಬಸವಾತ್ಮಜೆಯ ಕರೆ

ಬಾ ಬಾ ಬಾ ಎಲೆ ಶರಣ ನೀನು......
ಶರಣ ಮೇಳಕೆ ಬಂದು ಪಾವನನಾಗು ॥ ಪ ॥

ವಿಶ್ವಗುರು ಬಸವಣ್ಣ ಕೊಟ್ಟಿರುವ ಧರ್ಮದ
ಸೋದರತೆ ಬಿಂಬಿಸಲು ಬಾ ಧರ್ಮ ಬಂಧು ॥ ಅ.ಪ.॥

ಅಂದು ಆದಿಯಲಿ ಧರ್ಮಗುರು ಬಸವಣ್ಣ
ಚಂದಾದ ಮಹಾಮನೆಯ ಕಟ್ಟಿ ಕರೆದರು ತಾವು
ಅನುಭವ ಮಂಟಪದ ಆನಂದ ತೊಟ್ಟಿಲಲಿ
ತತ್ವ ಜೋಗುಳ ಹಾಡಿ ಶರಣ ಶಿಶುಗಳ ತೂಗಿ ॥ 1 ॥

ನಾಡ ಬಲ್ಲಿದರೆಲ್ಲ ಕೂಡಿದರು ಹುರುಪಿನಲಿ
ಸೂಡ ಕಟ್ಟಿದರು ಶಿವ ನುಡಿಯ
ದೇವ ಮಹಿಮೆಯ ಸಾರಿ ಮನುಜ ಘನತೆಯ ತೋರಿ
ವಚನ ಧರ್ಮದ ಸಿರಿಯು ಸಂಭ್ರಮಿಸಿತಲ್ಲಿ ॥ 2 ॥

ಸಮತೆಯ ಸಾರಲಿಕೆ ಆಯಿತೊಂದು ಕ್ರಾಂತಿ
ಧರ್ಮಪಿತ ಬಸವಗುರು ಗಡಿಪಾರು ಪಡೆದಿಹರು
ಹರಳಯ್ಯ ಮಧುವಯ್ಯ ಪ್ರಾಣವನು ತೆತ್ತಿಹರು
ಮಾಚಯ್ಯ ಚೆನ್ನಣ್ಣ ನಾಗಲೆಯು ಕಾದಿಹರು ॥ 3 ॥

ಶರಣರ ಕರುಳಿನ ಕರೆಯು ತಾ ಕೇಳಿಸದೆ?
ನಿನ್ನ ಋಣ ತೀರಿಸುವ ಛಲವು ತಾ ಮೊಳೆಯದೆ?
ವಚನ ವಾಙ್ಮಯವನ್ನು ನಮಗಾಗಿ ರಕ್ಷಿಸಲು
ಬಲಿದಾನ ಗೈದವರ ಮಹಾತ್ಯಾಗ ಅರಿಯೆಯಾ? ॥ 4 ॥

ಕೂಡಲ ಸಂಗಮವು ಧರ್ಮಕ್ಷೇತ್ರವು ಎಂದು
ಶರಣ ವ್ರತ ಸ್ವೀಕರಿಸಿ ಶರಣ ಮೇಳಕೆ ಬಂದು
ಗಣಲಿಂಗ ದರ್ಶನವ ಪಡೆದು ಪುಳಕಿತನಾಗು
ಸಮುದಾಯ ಪ್ರಾರ್ಥನೆಯ ಮಾಡಿ ಧನ್ಯನಾಗು ॥ 5 ॥

ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ತತ್ತ್ವವ ತಿಳಿದು ವಿಶ್ವಧರ್ಮಿಯೆ ಆಗು
ಬಸವ ಕಿರಣವೆ ಆಗಿ ತತ್ವವನು ಪಸರಿಸು
ಸಚ್ಚಿದಾನಂದ ಪ್ರಿಯೆ ಮಾತೆಯಾ ಕರೆಯಿದು ॥ 6 ॥

ಬಸವ ವಚನಾಮೃತ

ಭಕ್ತನು ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ ಲಿಂಗದೇವನು.

ಕಿರಣ ಗನ್ನಡಿ

ಮುಖ ಪುಟ : ಬಸವ ಕಲ್ಯಾಣದಲ್ಲಿ ನಿರ್ಮಾಣಗೊಂಡಿರುವ 108 ಅಡಿ ಬಸವ ಪುತ್ಥಳಿ
ಹೊದ್ದಿಕೆಯ ನಾಲ್ಕನೆಯ ಪುಟ : ಹೆಲಿಕಾಪ್ಟರಿನಲ್ಲಿ ಪುಷ್ಪವೃಷ್ಟಿ

ನವೆಂಬರ್–ಡಿಸೆಂಬರ್ ತಿಂಗಳಿನಲ್ಲಿ ಬರುವ ಹಬ್ಬ ಹುಣ್ಣಿಮೆ ಉತ್ಸವಗಳು

ನವೆಂಬರ್ 28 – ಚನ್ನಬಸವ ಲಿಂಗೈಕ್ಯ ದಿನ

ಶರಣ ವ್ರತ ಸ್ವೀಕಾರದ ದಿನಗಳು

ಡಿಸೆಂಬರ್ 02	–	ಗುರು ಸಾರಾಯ ಸಂಪದ್ ವ್ರತ 40 ದಿವಸ
ಡಿಸೆಂಬರ್ 12	–	ಲಿಂಗ ಸಾರಾಯ ಸಂಪದ್ ವ್ರತ 30 ದಿವಸ
ಡಿಸೆಂಬರ್ 22	–	ಜಂಗಮ ಸಾರಾಯ ಸಂಪದ್ ವ್ರತ 20 ದಿವಸ
ಜನವರಿ 01	–	ಪ್ರಸಾದ ಸಾರಾಯ ಸಂಪದ್ ವ್ರತ 10 ದಿವಸ

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್
ಬೆಂಗಳೂರು-560010
ದೂರವಾಣಿ : 080-23131476 / 22923736 / 09945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behaif of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476. Send SMS to 9945806297/ 9738028585/ 8892912123
Email :- kalyanakirana1970@gmail.com

ಸಂಪಾದಕೀಯ :

ಅಭೂತಪೂರ್ವ 11ನೇ ಕಲ್ಯಾಣ ಪರ್ವ

ಮುಗಿಲೆತ್ತರಕೆ ಬೆಳೆದು ನಿಂತ ಬಯಲ ಬ್ರಹ್ಮನಿಗೆ
ಆಕಾಶ ಗಂಗೆಯಲ್ಲಿ ಮಜ್ಜನ
ನಕ್ಷತ್ರಗಳೇ ಪುಷ್ಪಾಳಿಗಳು
ಸೂರ್ಯ ಚಂದ್ರರೇ ಆರತಿ
ಸುಪ್ರಭಾತದ ಇಬ್ಬನಿಯ ಆವಿಯೇ ಧೂಪಾರ್ಪಣೆ
ವಿಶಾಲ ಆಗಸವೇ ದಿವ್ಯ ಪ್ರಭಾವಳಿ
ಬೀಸುವ ಗಾಳಿಯ ಗುಂಜಾರವವೇ ಗಂಟಾನಾದ
ಮಂದಸ್ಮಿತ ಮುಖದಿಂದ ಅಭಯ ಮುದ್ರೆಯಲ್ಲಿ
ಕುಳಿತ ಗುರು ಬಸವನ ನೋಡಿ, ಮಾತು ನಿಂತು
ನಿಬ್ಬೆರಗಾದೆನಯ್ಯಾ, ಸಚ್ಚಿದಾನಂದ.

ದಿನಾಂಕ 28–10–2012, ಒಂದು ಅವಿಸ್ಮರಣೀಯ ದಿನ. ಒಂದು ಮಹತ್ವಪೂರ್ಣವಾದ ಸಿದ್ಧಿ ಪೂರ್ಣಗೊಂಡ ದಿನ. ದಿ.1–9–2004ರಂದು ಬಸವ ಕಲ್ಯಾಣದ ಶರಣ ಶೈಲದ ಮೇಲೆ 63 ಅಡಿ ಎತ್ತರದ ಮೂರ್ತಿಯ ನಿರ್ಮಾಣಕ್ಕೆ ಮಾರ್ಕ್ ಮಾಡಲು ಹೋಗಿದ್ದೆವು. ಏಕೋ ಅದು ಸಣ್ಣದು ಎನ್ನಿಸಿ 108 ಅಡಿ ಎತ್ತರದ ಪುತ್ಥಳಿ ಮಾಡಲು ಸಂಕಲ್ಪಿಸಿದೆವು. ಬಹು ದೊಡ್ಡ ಯೋಜನೆ, ನಮ್ಮ ಆರ್ಥಿಕ ಶಕ್ತಿಗೆ ಮೀರಿದ್ದು. ಗುರು ಬಸವಣ್ಣನವರ ಮೇಲೇ ಭಾರ ಹಾಕಿ ಕೆಲಸ ಶುರು ಮಾಡಿಸಿದೆವು. ಕೆಲಸವು ಒಂದು ದಿನವೂ ನಿಲ್ಲದಂತೆ ಆರ್ಥಿಕ ಸಂಪನ್ಮೂಲ ಒದಗಿ ಬಂದಿತು. ನಿರಂತರವಾಗಿ 8 ವರ್ಷಕಾಲ ನಡೆದು ದಿ.28 ರಂದು ಲೋಕಾರ್ಪಣೆಗೊಂಡಿತು.

ಕಲ್ಯಾಣ ನಲಿವಂತೆ ಬಲಬಂತೆಮಗೆ : ಇದು ಶರಣರ ಕಾಲಜ್ಞಾನ. ಶರಣ. ಸೂರ್ಯಕಾಂತ ಗುರುಪಾದಪ್ಪ ನಾಗಮಾರಪಳ್ಳಿಯವರು ಬೃಹತ್ ಪುತ್ಥಳಿಯ ಮೇಲೆ ಪುಷ್ಪವೃಷ್ಟಿ ಮಾಡಲು ಉಕ್ಕಿನ ಹಕ್ಕಿ –ಹೆಲಿಕಾಪ್ಟರ್ ವ್ಯವಸ್ಥೆ ಮಾಡಿದ್ದರು. ಇದಕ್ಕಾಗಿ ನಾನು ಹೆಲಿಕಾಪ್ಟರ್ ಏರಬೇಕಾಯಿತು. ಅದರಲ್ಲಿ ಕುಳಿತು ಮೇಲೆ ಹೋಗಿ ಕೆಳಗೆ ನೋಡಿದರೆ ಜನ ಸಾಗರ. ಪೆಂಡಾಲ್ ತುಂಬ ಜನ ಜನರ ಓಡಾಟ ನದಿಯ ಪ್ರವಾಹದ ನೆನಪು ತರುತ್ತಿತ್ತು. ಅನೇಕ ರಾಜ್ಯಗಳ ಶರಣರು ಬಂದಿದ್ದರು. ಮೈಸೂರು ಜಿಲ್ಲೆಯ ಕೆ.ಆರ್.ನಗರದಿಂದ ಶರಣ ಸಾ.ರಾ. ಮಹೇಶ್ ಅವರ ನೇತೃತ್ವದಲ್ಲಿ 45 ಬಸ್ಸುಗಳು ಬಂದಿದ್ದವು. ಊಟಿಯಿಂದ 3 ಬಸ್ಸುಗಳು. ಎಲ್ಲರಲ್ಲೂ ಏನೋ ಸಂಭ್ರಮ ಮನೆ ಮಾಡಿತ್ತು. ಹೆಲಿಕಾಪ್ಟರಿನಿಂದ ಪುಷ್ಪವೃಷ್ಟಿಯಾದಾಗ ಕೆಳಗೆ ಇದ್ದ ಜನರ ಕಣ್ಣಲ್ಲಿ ಆನಂದ ಬಾಷ್ಪ ಉದುರಿದವಂತೆ.

ಬಸವ ಸಂಕಲ್ಪ : ಬಸವ ಪುತ್ಥಳಿಯ ನಿರ್ಮಾಪಕರು ಮತ್ತು ಬಸವಾತ್ಮಜೆಯು ನಾನೇ ಆಗಿರುವುದರಿಂದ ನಾನೇ ಪುಷ್ಪವೃಷ್ಟಿಯ ಮೂಲಕ ಲೋಕಾರ್ಪಣೆ ಮಾಡಬೇಕೆಂದು ಅನೇಕ ಭಕ್ತರ ಇಚ್ಛೆ. ಆದರೆ ನಾವೇ ನಿರ್ಮಾಪಕರಾಗಿರುವುದರಿಂದ ನಾನೇ ಮಾಡುವುದು ಸೂಕ್ತ ಕಾಣದು ಎಂದು ಪೂಜ್ಯ ಶ್ರೀ ಯೋಗಗುರು ರಾಮದೇವ ಬಾಬಾರನ್ನು ಆಮಂತ್ರಿಸಿದ್ದೆವು. ಅವರು ಬರಲು ಒಪ್ಪಿದ್ದರು. ಸ್ವತಃ ಅವರೇ ನನ್ನ ಜೊತೆ ಮಾತನಾಡಿ ಬರುವುದಾಗಿ ತಿಳಿಸಿದರು. ದೆಹಲಿಯಿಂದ ವಿಮಾನದಲ್ಲಿ ಹೈದರಾಬಾದಿಗೆ ಬಂದು, ಅಲ್ಲಿಂದ ಹೆಲಿಕಾಪ್ಟರಿನಲ್ಲಿ ಬಸವ ಕಲ್ಯಾಣಕ್ಕೆ ಬರುವುದಾಗಿ ಹೇಳಿದ್ರು. ನಾವೇನು ವ್ಯವಸ್ಥೆ ಮಾಡಬೇಕು ಎಂದಾಗ ನಕ್ಕು "ನಾವೆಲ್ಲ ವ್ಯವಸ್ಥೆ ಮಾಡಿಕೊಂಡು ಸಮಯಕ್ಕೆ ಸರಿಯಾಗಿ ಬರುತ್ತೇವೆ" ಎಂದರು.

ಎಂಟು ದಿನ ಬಿಟ್ಟು ಇ-ಮೇಲ್ ಮೆಸೇಜ್ ಬಂತು "ಬಸವೇಶ್ವರ ದೇವಸ್ಥಾನದವರಿಗೂ ನಿಮಗೂ ಭಿನ್ನಾಭಿಪ್ರಾಯವಿದೆಯೆ ?" ಎಂದು ಕೇಳಿ. "ತಾತ್ತ್ವಿಕ ಭಿನ್ನಾಭಿಪ್ರಾಯವಿದೆ. ಆದರೆ ಅವರ ಶಕ್ತಿ ಸಣ್ಣದು, ನಗಣ್ಯ. ಕಲ್ಯಾಣ ಪರ್ವ ಬೃಹತ್ ಕಾರ್ಯಕ್ರಮ. ಇದರ ಮುಂದೆ ಅವರ

ವಿರೋಧ ಏನೇನೂ ಅಲ್ಲ." ಎಂದು ನಾನು ಮಾರುತ್ತರಿಸಿದೆ. ಆದರೂ ಅವರು ಹಿಂಜರಿದರು. ಇದೇ ಸಮಯದಲ್ಲಿ ಬಾಬಾ ಅವರು ಶ್ರೀಮತಿ ಸೋನಿಯಾ ಗಾಂಧಿಯವರ ಬಗ್ಗೆ ಕೆಟ್ಟ ಟೀಕೆ ಮಾಡಿದ್ದರಿಂದ ಕಾಂಗ್ರೆಸ್ಸಿನ ಸಂಸದರು, ಶಾಸಕರು ಅವರು ವಿರುದ್ಧ (ದೇಶಾದ್ಯಂತ)ತೀವ್ರ ಪ್ರತಿಭಟನೆ ಮಾಡಿದರು. ಬಾಬಾ ಅವರ ಧೈರ್ಯದ ವೈಖರಿ ಕಂಡು ನನಗೆ ನಗು ಬಂದಿತು. ಇಲಿ(ಬಸವೇಶ್ವರ ದೇವಸ್ಥಾನ ಸಮಿತಿ)ಯನ್ನು ಕಂಡು ಓಡಿ ಹೋಗುವ ಇವರು ಹುಲಿ(ಕೇಂದ್ರ ಸರಕಾರದ ಭ್ರಷ್ಟಾಚಾರ)ಯನ್ನು ಹೇಗೆ ಎದುರಿಸಬಲ್ಲರು ಎಂದೆನಿಸಿತು. ಮಹಾರಾಷ್ಟ್ರ ಸರಕಾರದ ಕೆಲವು ಮಂತ್ರಿಗಳು, ಶಾಸಕರು, ಸಂಸದರು ನಮ್ಮ ಕಾರ್ಯಕ್ರಮಕ್ಕೆ ಬರಲು ಸ್ವಯಂ ಪ್ರೇರಣೆಯಿಂದ ಒಪ್ಪಿದ್ದರು. ಬಾಬಾ ಅವರ ಹೆಸರು ಮುದ್ರಣಗೊಂಡಿದ್ದು ನೋಡಿ ತಾವು ಬರುವುದಿಲ್ಲವಾಗಿ ಹೇಳಿದರು. ಪುಷ್ಪವೃಷ್ಟಿಯನ್ನು ನಾನೇ ಮಾಡಬೇಕಾಗಿ ಬಂದಾಗ ಅಂದುಕೊಂಡೆ, "ಅಪ್ಪ ಬಸವಣ್ಣನವರಿಗೆ ಬಾಬಾ ಅವರಿಂದ ಪುಷ್ಪವೃಷ್ಟಿ ಮಾಡಿಸಿಕೊಳ್ಳುವ ಇಷ್ಟವಿಲ್ಲ. ಅದಕ್ಕಾಗಿ ಬಸವೇಶ್ವರ ದೇವಸ್ಥಾನ ಸಮಿತಿಯವರು ಪತ್ರ ಬರೆಯುವಂತೆ ಮಾಡಿ ಬಾಬಾ ಅವರು ಬರದೆ ಇರಲು ಪ್ರೇರಣೆ ನೀಡಿದ್ದಾರೆ. ಅನೇಕ ಭಕ್ತರ ಮನೋಭಿಲಾಷೆಯಂತೆ ಗುರು ಬಸವಣ್ಣನವರಿಗೂ ನನ್ನಿಂದಲೇ ಪುಷ್ಪವೃಷ್ಟಿ ಮಾಡಿಸಿಕೊಳ್ಳುವ ಅಪೇಕ್ಷೆ. ನನ್ನ ಇಚ್ಛೆ ಬಾಬಾ ಅವರಿಂದ ಮಾಡಿಸುವುದಾದರೆ ಗುರು ಬಸವಣ್ಣನವರ ಇಚ್ಛೆ ನನ್ನಿಂದ ಮಾಡಿಸಿಕೊಳ್ಳುವುದು. ಅಂತಿಮವಾಗಿ ಇದೇ ನೆರವೇರಿತು. ಈ ಕಾರ್ಯಕ್ರಮದಲ್ಲಿ ಭಾಗಿಯಾಗುವುದಕ್ಕೂ ಪುಣ್ಯವಿರಬೇಕು."

ಕಲ್ಯಾಣದ ಜನರ ಸಂಭ್ರಮ ಮತ್ತು ಸಹಕಾರ

ಕಲ್ಯಾಣದ ಜನರಿಗೆ ಹಿಗ್ಗೋ ಹಿಗ್ಗು. ಎಲ್ಲ ದಾರಿಗಳೂ ರೋಮ್‌ನತ್ತ ಎಂಬಂತೆ ಎಲ್ಲ ದಾರಿಗಳೂ ಕಲ್ಯಾಣದತ್ತ ಧಾವಿಸಿದ್ದವು. ಕಂಡರಿಯದಷ್ಟು, ಕೇಳಿ ಅರಿಯದಷ್ಟು ಜನರು ಕಲ್ಯಾಣದಲ್ಲಿ ಗಿಜಗುಡುತ್ತಿದ್ದರು. ಅಕ್ಕನಾಗಲಾಂಬಿಕಾ ಮಹಿಳಾ ಸಂಘಟನೆಯಾಗಿ ಅನೇಕ ಶರಣೆಯರು ಎರಡು ಮೂರು ತಿಂಗಳು ಸಕ್ರಿಯವಾಗಿ ದುಡಿದಿದ್ದಾರೆ. ಕಲ್ಯಾಣದ ಜನ ಕಾಣಿಕೆ ಸಂಗ್ರಹಿಸಲು ಹೋದವರಿಗೆ ಉದಾರವಾಗಿ ಕಾಣಿಕೆ ನೀಡಿದ್ದಾರೆ. ಬಂದ ಶರಣರನ್ನು ಮೂರು ದಿವಸಗಳ ಕಾಲ ತಮ್ಮ ಮನೆಗಳಲ್ಲಿ ಇರಿಸಿಕೊಂಡು ಉಪಚರಿಸಿದ್ದಾರೆ. ಕೆಲವರಂತೂ ತುಂಬಿದ ಮನೆಗಳನ್ನು ಹಾಗೆಯೇ ಬಿಟ್ಟು ಕೀಲಿಕೈ ಕೊಟ್ಟು ಹೊರಗೆ ಉಳಿದಿದ್ದಾರೆ. ಸಂಘ ಸಂಸ್ಥೆಗಳವರು ತಮ್ಮ ತಮ್ಮ ಸಂಸ್ಥೆಗಳನ್ನು ಬಿಟ್ಟುಕೊಟ್ಟಿದ್ದಾರೆ. ಅಂದು ಅಪ್ಪ ಬಸವಣ್ಣನವರ ಕಾಲದಲ್ಲಿ ಬಂದ ಶರಣರನ್ನು ತಮ್ಮ ಮನೆಗಳಿಗೆ ಬರಮಾಡಿಕೊಂಡು ಶರಣರು ಉಪಚರಿಸಿದಂತೆ ಈಗಲೂ ಪರವೂರಿಂದ ಬಂದವರನ್ನು ಇಂಬಿಟ್ಟುಕೊಂಡು ಉಪಚರಿಸಿದ್ದಾರೆ. ಯಾರೋ ವಿರೋಧಿಗಳು ನಾಲ್ಕುಜನರಿಂದ ಕಲ್ಯಾಣಕ್ಕೆ ಬರಬಹುದಾದ ಕೆಟ್ಟ ಹೆಸರನ್ನು ಕಲ್ಯಾಣದ ಜನತೆ ತಮ್ಮ ಆತಿಥೇಯ ಗುಣದಿಂದ ತೊಡೆದು ಹಾಕಿದ್ದಾರೆ. ಪೋಲೀಸರು ನಗೆಯಾಡುತ್ತ ಮಾತನಾಡುತ್ತಿದ್ದರು, "ಅಲ್ಲಿ ನಾಲ್ಕು ಜನರು ಕಲ್ಯಾಣ ಪರ್ವದ ವಿರುದ್ಧ ಕೂಗಾಡುತ್ತಿದ್ದಾರೆ. ಅವರ ಹೆಂಡತಿ ಮಕ್ಕಳು ಇಲ್ಲಿ ಕಾರ್ಯಕ್ರಮದಲ್ಲಿ ಭಾಗಿಗಳಾಗಿ, ಪ್ರಸಾದ ಸ್ವೀಕರಿಸುತ್ತಿದ್ದಾರೆ."

"ಏನ್ರಮ್ಮಾ, ನಿಮ್ಮ ಗಂಡ ಅಲ್ಲಿ ಕೂಗಾಡುತ್ತಿದ್ದಾರೆ. ನೀವು ನೋಡಿದರೆ ಇಲ್ಲಿ." ಎಂದು ಕೇಳಿದರೆ, "ಅವರಿಗೆ ತಲೆ ಕೆಟ್ಟಿದೆ. ಅದಕ್ಕೇ ವಿರೋಧಿಸುತ್ತಾರೆ" ಎಂದರಂತೆ. ಜನ ಸಾಗರ ಹರಿಯುತ್ತಿದ್ದುದನ್ನು ಕಂಡು ನನಗೆ ಒಳಗೇ ಆತಂಕ. "ಪ್ರಸಾದ ವ್ಯವಸ್ಥೆ ಹೇಗೆ ಮಾಡುವರೋ?" ಎಂಬ ಚಿಂತೆ. ಪ್ರಸಾದ ಅಕ್ಷಯವಾಯಿತು. ಗುರು ಬಸವಣ್ಣನವರಿಂದ ಒಂದು ಮಹಾನ್ ಪವಾಡವೇ ನಡೆಯಿತು ಎಂಬಂತೆ ಕಾರ್ಯಕ್ರಮ, ಪ್ರಸಾದ ವ್ಯವಸ್ಥೆ ನಡೆದು ಹೋಯಿತು. 28ರಂದು ಹರಿದ ಜನಸಾಗರ ಹಿಡಿದುಕೊಂಡು ಮೂರು ದಿವಸಗಳ ಕಾಲದ ಜನ ಸಮೂಹ ನೋಡಿದರೆ ನಾಲ್ಕು ಲಕ್ಷ ಜನಸಂಖ್ಯೆ ದಾಟಿರಬಹುದೆಂದು ಅಂದಾಜು. ಬಸವಣ್ಣನ ಲೀಲೆಯೇ ಲೀಲೆ, ರಕ್ಷೆಯೇ ರಕ್ಷೆ. ಬಸವ ಕಲ್ಯಾಣದಲ್ಲಿ 12ನೆಯ ಶತಮಾನದ ವೈಭವ 21ನೆಯ ಶತಮಾನದಲ್ಲಿ ಮತ್ತೊಮ್ಮೆ ಮರುಕಳಿಸಿತು.

–ಬಸವಾತ್ಮಜೆ.



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ

ಇಪ್ಪತ್ತಾರನೆಯ ಶರಣ ಮೇಳ

2013ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ(ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ತಾರನೆಯ ಶರಣ ಮೇಳವು 2013ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗ ಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮ ಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 150 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ
ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧ ಗಯೆ ಧರ್ಮ ಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೂಡಲ ಸಂಗಮ, ಬ್ಯಾಂಕ್ ಖಾತೆಗಳು

Sharana Mela Utsava Samithi, SB A/c 10818354899
Basava Dharma Peetha, SB A/c No. 10818354684
Basava Mahamane Charitable Trust SB A/c 32391821105

Sharana Mela Utsava Samithi, (Canara Bank, Bangalore) SB A/c 1145101024057 ಕಾಣಿಕೆ ಕಳಿಸುವವರು ನೇರವಾಗಿ ವರ್ಗಾಯಿಸಿದರೆ ಕಾರ್ಯಾಲಯಕ್ಕೆ ತಿಳಿಸಬೇಕು. 80ಜಿ ಇನ್‌ಕಮ್‌ಟ್ಯಾಕ್ಸ್ ರಿಯಾಯಿತಿ ಬೇಕೆನ್ನುವವರು ಕಾರ್ಯಾಲಯಕ್ಕೆ ಸಂಪರ್ಕಿಸಿ.

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 08351-268014/268007/268140

ಬಸವ ವಚನಾಮೃತ

- ಮಾತಾಜಿ

1014. ಇಷ್ಟಲಿಂಗ ದರ್ಪಣ

ತನ್ನ ಭಕ್ತಿ ತಾನರಿಯದ ಕಾರಣ
ತನ್ನಭಿಮುಖ ಲಿಂಗ ತಾನೆಯಾದುದ,
ನಿಮ್ಮ ಚರಣ ಬಲ್ಲುದಯ್ಯಾ.
ಪಾದಸೇವಕ ಪ್ರಾಣವೆ ಇಷ್ಟಲಿಂಗವೆಂದರಿದ ಲಿಂಗದೇವ. –ಬವದೀ. 1017

ಭಕ್ತಿಯೂ ಶಕ್ತಿಯುತವಾದುದೆ. ಆದರೆ ತನ್ನ ಹಿರಿಮೆಯನ್ನು ಅದು ಅರಿಯದು. ಅದೇ ರೀತಿ ಲಿಂಗದ ಶಕ್ತಿಯೂ ಅಪ್ರತಿಮವಾದುದೆ. ಆದರೆ ಅದು ಸಹ ತನ್ನ ಹಿರಿಮೆಯನ್ನು ತಾನು ಅರಿಯದು. ಇವೆರಡರ ಮಹಿಮೆ ತಿಳಿಯಬೇಕಾದರೆ ದರ್ಪಣ ಬೇಕು. ಅದೇ ಇಷ್ಟಲಿಂಗ ದರ್ಪಣ. ಇದರ ಮೂಲಕವೇ ಭಕ್ತಿಯ ಹಿರಿಮೆ, ಲಿಂಗದೇವನ ಶಕ್ತಿಯ ಹಿರಿಮೆ ಗೋಚರವಾಗುವುದು. ಪರಮಾತ್ಮನ ಪಾದಸೇವೆ ಮಾಡುವ ಪ್ರಾಣವೇ ಇಷ್ಟಲಿಂಗವಾಗಿ ಸಾಕಾರಗೊಂಡು ಭಕ್ತಿಯ ಮತ್ತು ಲಿಂಗದೇವನ ಶಕ್ತಿಯ ಹಿರಿಮೆಯನ್ನು ಪ್ರಚುರಪಡಿಸುವುದು.

1015. ವಿಭೂತಿಯ ಮಹಿಮೆ

ಕೇಳಿಭೋ ಕೇಳಿಭೋ ವಿಪ್ರರೆಲ್ಲರೂ–
ಬ್ರಹ್ಮಾಂಡಪುರಾಣದಲ್ಲಿ ನಿಮ್ಮ ಬ್ರಹ್ಮ ನುಡಿದ ವಾಕ್ಯವು :
ವಿಪ್ರಾಣಾಂ ವೇದವಿದುಷಾಂ ವೇದಾಂತಜ್ಞಾನವೇದಿನಾಂ ।
ಸಿತೇನ ಭಸ್ಮನಾ ಕಾರ್ಯಂ ತ್ರಿಪುಂಡ್ರಮಿತಿ ಪದ್ಮಭೂ ॥ ಎಂದುದಾಗಿ
ಇದ ನಂಬಿಯೂ ನಂಬದ ಅಜ್ಞಾನದಿಂದ
ಶ್ರೀ ಮಹಾಭಸಿತವ ಬಿಟ್ಟು
ಮಣ್ಣು ಮಸಿ ಮರದ ರಸಂಗಳ ಮೋಹದಿಂದ
ನಿಮ್ಮ ಹಣೆಯಲ್ಲಿ ಬರೆದುಕೊಂಡಿರಾದಡೆ
ನಮ್ಮ ಲಿಂಗದೇವರಲ್ಲಿ,
ನಿಮ್ಮ ಅಧಿದೈವವೇ ನಿಮ್ಮ ಮೂಗ ಕೊಯ್ದು,
ಇಟ್ಟಿಗೆಯಲೊರಸಿ, ಕನ್ನಡಿಯ ತೋರಿ
ನಡೆಸಿ ನರಕದಲ್ಲಿ ಕೆಡಹದೆ ಬಿಡ ಕಾಣಿಭೋ ।
ಇದನರಿದು ಮರೆಯದೆ ಧರಿಸಿ ಭೋ।
ಕೆಡಬೇಡ ಕೆಡಬೇಡ !
ಮಹತ್ತಪ್ಪ ಶ್ರೀ ಮಹಾಭಸಿತವ ಧರಿಸಿ ಮುಕ್ತರಾಗಿರೇ ! –ಬವದೀ. 1018

'ಬ್ರಾಹ್ಮಣರೆಲ್ಲ ಕೇಳಿರಿ ಕೇಳಿರಿ. ಬ್ರಹ್ಮಾಂಡ ಪುರಾಣದಲ್ಲಿ ಸ್ವತಃ ಬ್ರಹ್ಮನು ಹೀಗೆ ಹೇಳಿದ್ದಾನೆ. "ವೇದ ವಿದ್ವಾಂಸರಾದ ವಿಪ್ರರು, ವೇದಾಂತ ಜ್ಞಾನ ಪಡೆದವರು, ಯಾವುದೇ ಕಾರ್ಯಮಾಡಲಿ ತ್ರಿಪುಂಡ್ರವನ್ನು ಧರಿಸಿಯೇ ಮಾಡಬೇಕು." ಇದನ್ನು ನಂಬಿ ವಿಪ್ರರೆಲ್ಲರೂ ಶ್ರೀ ಮಹಾಭಸಿತವ ಧರಿಸಿರಿ. ಇದನ್ನು ನಂಬದೆ ಅಜ್ಞಾನದಿಂದ ಶ್ರೇಷ್ಠವಾದ ಭಸ್ಮವನ್ನು ಬಿಟ್ಟು ಮಣ್ಣು, ಮಸಿ, ಮರದ ರಸ ಮುಂತಾದುವನ್ನು ಹಣೆಯಲ್ಲಿ ಬರೆದುಕೊಂಡರೆ ನಿಮ್ಮ ಅಧಿದೈವವೇ ನಿಮ್ಮ ಮೂಗ ಕೊಯ್ದು, ಇಟ್ಟಿಗೆಯಲ್ಲಿ ಒರೆಸಿ, ಕನ್ನಡಿಯ ತೋರಿಸಿ ಅಣಕಿಸದೆ ಬಿಡುವುದಿಲ್ಲ. ಇದನರಿದು ಮರೆಯದೆ ಧರಿಸಿ ಶ್ರೀ ಮಹಾಭಸಿತವ ಮತ್ತು ಮುಕ್ತರಾಗಿರಿ' ಎಂದು ಗುರು ಬಸವಣ್ಣನವರು ಕರೆಕೊಟ್ಟಿದ್ದಾರೆ. ಜಂಬೂದ್ವೀಪವೆಂದು ಹೆಸರು ಹೊಂದಿದ ಭಾರತದಲ್ಲಿ ಮೊದಲು ಇದ್ದಿದ್ದು ಶಿವನ ಆರಾಧನೆಯೊಂದೇ. ಪ್ರತಿ ಊರು, ನಗರಗಳಲ್ಲೂ ನಗರ ದೇವತೆ ಶಿವನೇ ಆಗಿರುತ್ತಿದ್ದ. ಶಿವನು ವೇದ ಪೂರ್ವದ ಗುರು. ಕಾಲಾನಂತರದಲ್ಲಿ ವಿಷ್ಣು, ರಾಮ, ಕೃಷ್ಣ ಮುಂತಾದವರ ಪೂಜೆ ಬಳಕೆಗೆ ಬಂದಿತು. ಹೀಗಾಗಿ ಮೊದಲಿನ ಕಾಲದಲ್ಲಿ ಶಿವನ ಆರಾಧನೆ, ಕೇವಲ ವಿಭೂತಿಧಾರಣೆ ಮಾತ್ರ ಇದ್ದಿತು.

1016. ರುದ್ರಾಕ್ಷಿಯೇ ಸಾಧನ

ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವಪಾವನವು.
ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವಕಾರಣವು.
ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವಸಾಧನವು.
ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವಸಿದ್ಧಿ.
ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವ ಪಾಪಕ್ಷಯವು.
ಅಯ್ಯಾ, ನಿಮ್ಮ ಪಂಚವಕ್ತ್ರಂಗಳೇ ಪಂಚಮುಖದ ರುದ್ರಾಕ್ಷಿಗಳಾದುವಾಗಿ,
ಅಯ್ಯಾ, ಲಿಂಗದೇವಯ್ಯಾ
ಎನ್ನ ಮುಕ್ತಿಪಥಕ್ಕೆ ಶ್ರೀ ರುದ್ರಾಕ್ಷಿಯೇ ಸಾಧನವಯ್ಯಾ.

–ಬವದೀ. 1019

ರುದ್ರಾಕ್ಷಿ ಒಂದು ಗಿಡದ ಬೀಜ. ಬಹುಶಃ ರುದ್ರನಿಂದ ಕಂಡು ಹಿಡಿಯಲ್ಪಟ್ಟ ಕಾರಣದಿಂದ ಇರಬಹುದು ಈ ಮಣಿಯ ಹೆಸರಿಗೆ ರುದ್ರನ ಹೆಸರು ಹೊಂದಿಕೊಂಡು ಬಂದಿದೆ. ಇವು ಬಹು ಗಟ್ಟಿ ಕಾಳುಗಳು. ಸುಲಭವಾಗಿ ಕೊಳೆಯುವುದಿಲ್ಲ. ಶಿವಭಕ್ತರಿಗೆ ಅಲಂಕಾರಿಕ ಮಣಿಗಳಾಗಿಯೂ ಕೆಲಸ ಮಾಡುತ್ತವೆ. ಜಪಕ್ಕೆ ಅನುಕೂಲಕರವಾದ್ದರಿಂದ ರುದ್ರಾಕ್ಷಿ ಸರ್ವಪಾವನವು, ಸರ್ವಸಾಧನವು ಸರ್ವಸಿದ್ಧಿ. ಇದರ ಜಪದಿಂದ ಪಾಪಕ್ಷಯವು. ಪರಮಾತ್ಮನಿಗೆ ಐದು ಮುಖಗಳು– ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಎಂಬುದಾಗಿ. ಈ ಐದು ಮುಖಗಳಿಂದ ದೇವರು ಸೃಷ್ಟಿ, ಸ್ಥಿತಿ, ಲಯ ತಿರೋದಾನ, ಅನುಗ್ರಹ ಎಂಬ ಐದು ಕರ್ತವ್ಯಗಳನ್ನು ನಿರ್ವಹಿಸುವನು. ಈ ಐದು ಮುಖಗಳೇ ಪಂಚಮುಖದ ರುದ್ರಾಕ್ಷಿಗಳಾಗಿವೆ ಎಂಬಂತೆ ರುದ್ರಾಕ್ಷಿ ಮಣಿಗೆ ಸಾಮಾನ್ಯವಾಗಿ 5 ಮುಖಗಳಿರುತ್ತವೆ. ಆದ್ದರಿಂದ ಲಿಂಗದೇವಯ್ಯ ಎನ್ನ ಮುಕ್ತಿ ಪಥಕ್ಕೆ ರುದ್ರಾಕ್ಷಿಯೇ ಸಾಧನ.

1017. ರುದ್ರಾಕ್ಷಿಯ ಹೆಗ್ಗಳಿಕೆ

ಅಯ್ಯಾ ರುದ್ರಾಕ್ಷಿಯಿಂದ ಹರಿದೆನು ಭವಪಾಶಂಗಳ.
ಅಯ್ಯಾ ರುದ್ರಾಕ್ಷಿಯಿಂದ ಮುರಿದೆನು ತನುಗುಣಾದಿಗಳ.
ಅಯ್ಯಾ ರುದ್ರಾಕ್ಷಿಯಿಂದ ಒರೆಸಿದೆನು ಮಹಾಮಾಯೆಯ.
ಅಯ್ಯಾ ರುದ್ರಾಕ್ಷಿಯಿಂದ ಕಳೆದೆನು ಪಂಚ ಮಹಾಪಾತಕವ.
ಅಯ್ಯಾ ಲಿಂಗದೇವಾ,
ಶ್ರೀ ಮಹಾರುದ್ರಾಕ್ಷಿಯಿಂದ ಗೆಲಿದೆನಯ್ಯಾ ಸಕಲ ದುರಿತಂಗಳನು.–ಬವದೀ. 1020

ರುದ್ರಾಕ್ಷಿಯ ಧಾರಣೆಯಿಂದ ಭವಪಾಶವನು ಹರಿದೆ ; ತನುಗುಣಗಳನ್ನು ಮುರಿದೆ ; ಮನಸ್ಸನ್ನು ಆವರಿಸಬಹುದಾದ ಮಹಾಮಾಯೆಯನ್ನು ಗೆಲಿದೆನು. ಪಂಚಮಹಾಪಾತಕಗಳಾದ ಗುರು–ಲಿಂಗ–ಜಂಗಮ–ಆಚಾರ–ಪ್ರಸಾದ ದ್ರೋಹ ಇವನ್ನು ಕಳೆದೆನು. ರುದ್ರಾಕ್ಷಿಯ ಧಾರಣೆಯಿಂದ ಸಕಲ ಪಾಪಗಳನ್ನು, ಕಷ್ಟಗಳನ್ನು ಗೆದ್ದುಬಿಟ್ಟೆನು.

1018. ರುದ್ರಾಕ್ಷಿ ಧರಿಸದವನು ಭವಿಯೇ ಸರಿ

ಶ್ರೀ ರುದ್ರಾಕ್ಷಿಯ ಧರಿಸಿದಾತನ ಲಿಂಗವೆಂಬೆ ;
ಶ್ರೀ ರುದ್ರಾಕ್ಷಿಯ ಧರಿಸದ ಅಧಮರನೆ ಭವಿಯೆಂಬೆ.
ಲಿಂಗದೇವಯ್ಯಾ, ಶ್ರೀ ರುದ್ರಾಕ್ಷಿಯ ದಿವ್ಯವೆಂದು ನೆರೆನಂಬಿ
ಧರಿಸುವ ಭಕ್ತರನೆ ನೀನೆಂಬೆ.

–ಬವದೀ. 1021

ಶ್ರೀ ರುದ್ರಾಕ್ಷಿಯ ಧರಿಸಿದಾತನನೆ ಲಿಂಗಭಕ್ತನೆಂಬೆ. ಧರಿಸದವರ (ಲಿಂಗಧಾರಣೆ ಇದ್ದರೂ ಸಹ) ಭವಿ ಎಂಬೆ. ರುದ್ರಾಕ್ಷಿಯಲ್ಲಿ ಅನನ್ಯ ನಂಬಿಕೆ ಇಟ್ಟು ದಿವ್ಯವೆಂದು ಧರಿಸಿದವರ ಸಾಕ್ಷಾತ್ ನೀನೆ ಎಂಬೆ ಲಿಂಗದೇವಾ.

1019. ಸರ್ವಾಂಗದಲ್ಲಿ ರುದ್ರಾಕ್ಷಿ ಧಾರಣೆ.

ಹಸ್ತ ತೋಳು ಉರ ಕಂಠ ಕರ್ಣ ಮಸ್ತಕದಲ್ಲಿ
ರುದ್ರಾಕ್ಷಿಯ ಧರಿಸಿಪ್ಪ ಸದ್ಭಕ್ತನೆ ರುದ್ರನು ನೋಡಾ,
ಅದೆಂತೆಂದಡೆ :
ಹಸ್ತೆ ಚೋರಸಿ ಕಂಠೇ ವಾ ಮಸ್ತಕೇ ವಾಪಿ ಧಾರಯೇತ್ ।
ಮುಚ್ಯತೇ ಸರ್ವಪಾಪೇಭ್ಯೋ ಸ ರುದ್ರೋ ನಾತ್ರ ಸಂಶಯಃ ॥
ಇಂತೆಂದುದಾಗಿ, ಸಮಸ್ತ ಪಾಪಂಗಳ ಕಳೆದು
ಕೂಡಲಸಂಗಯ್ಯ ತನ್ನಂತೆ ಮಾಡುವನು. –ಬವದೀ. 1022

ರುದ್ರಾಕ್ಷಿಯು ಅಷ್ಟಾವರಣದಲ್ಲಿ ಒಂದು. ಅಷ್ಟಾವರಣಗಳು ವಿರಕ್ತರು ಮತ್ತು ಗೃಹಸ್ಥರು– ಉಭಯತರಿಗೂ ಸಾಮಾನ್ಯ. ಗೃಹಸ್ಥರು ರುದ್ರಾಕ್ಷಿ–ವಿಭೂತಿ ಧರಿಸಬಾರದೆಂದೇನೂ ನಿಯಮವಿಲ್ಲ. ನಿಯಮದ ಪ್ರಕಾರ ಧರಿಸಬೇಕೆಂದಿದ್ದರೆ ಹಸ್ತ (ಮುಂಗೈ) ತೋಳು, ಎದೆಯ ಮೇಲೆ, ಕೊರಳಿನಲ್ಲಿ, ಕಿವಿಯಲ್ಲಿ, ನೆತ್ತಿಯ ಮೇಲೆ ರುದ್ರಾಕ್ಷಿಗಳನ್ನು ಧರಿಸಬೇಕು. ಹೀಗೆ ಧರಿಸಿದರೆ ಲಿಂಗದೇವನು ಸಮಸ್ತ ಪಾಪಗಳನ್ನು ಕಳೆದು ತನ್ನಂತೆ ಮಾಡುವನು.

1020. ದೇವರು ಪ್ರಣವ ಸ್ವರೂಪ

ಪ್ರಣವಾರೂಢನು ಪ್ರಣವ ಸ್ವರೂಪನು
ಪ್ರಣವ ಪ್ರಕೃತಿ ಸೌಂಜ್ಞನು
ಪ್ರಣವ ಷಡಂಗ ಸಮರಸ,
ನಮ್ಮ ಲಿಂಗದೇವರು.

–ಬವದೀ. 1023

ಪರಮಾತ್ಮನು ಪ್ರಣವ ಸ್ವರೂಪ. ಪ್ರಣವ ಎಂದರೆ ಓಂಕಾರ. ಓಂ ಇದು ಮೂರು ಮೂಲಾಕ್ಷರಗಳಿಂದ ಆಗಿದೆ. ಆ ಮೂರು ಮೂಲಾಕ್ಷರಗಳೆಂದರೆ ಅ ಉ ಮ. ಅ ಕಾರ ಸೃಷ್ಟಿಯ ಪ್ರಾರಂಭವನ್ನು ಉ ಕಾರವು ಸೃಷ್ಟಿಯ ಲೀಲೆಯನ್ನು, ಮಕಾರವು ಸೃಷ್ಟಿಯ ಲಯವನ್ನು ಸಂಕೇತಿಸುತ್ತದೆ. ಪರಮಾತ್ಮನು ಸತ್‌ಚಿತ್‌ಆನಂದ ಸ್ವರೂಪನು. ಅ ಕಾರವು ದೇವನ ಸದ್ರೂಪವನ್ನು ಉ ಕಾರವು ದೇವನ ಚಿದ್ರೂಪವನ್ನು ಮಕಾರವು ಆನಂದ ರೂಪವನ್ನು ಸಂಕೇತಿಸುತ್ತದೆ. ದೇವರು ಸೃಷ್ಟಿ ಸ್ಥಿತಿ ಲಯಗಳ ಕಾರಣಕರ್ತೃ ಎಂಬುದನ್ನು ಓಂಕಾರವು ಪ್ರತಿಪಾದಿಸುತ್ತದೆ.

ಪ್ರಣವಾರೂಢನು : ದೇವರ ಮೊದಲ ಹಂತ ಸ್ವಯಂಭು ಸ್ಥಿತಿ. ಆಗ ಅವನು ಸೃಷ್ಟಿಗೆ ಕಾರಣೀಭೂತನಾಗಿರಲಿಲ್ಲ. ಆರೂಢ ಅಂದರೆ ಅತೀತನು. ಸೃಷ್ಟಿಗೆ ಅತೀತನಾಗಿದ್ದ ಆಗ ಸೃಷ್ಟಿಯ ಚಟುವಟಿಕೆ ಪ್ರಾರಂಭವಾಗಿರಲಿಲ್ಲ. ನಂತರ ಪ್ರಣವ ಸ್ವರೂಪನಾದ.

ಪ್ರಣವ ಸ್ವರೂಪ : ಅಕಾರ ಉಕಾರ ಮಕಾರಗಳು ಸ್ಪಷ್ಟಗೊಂಡ ಸ್ಥಿತಿಯುಂಟಾಯಿತು. ಮೊದಲು ಜ್ಞಾನಶಕ್ತಿಯ ಆವಿರ್ಭಾವವಾಯಿತು. ನಾನು ಜಗತ್ತನ್ನು ಸೃಷ್ಟಿ ಮಾಡಬಲ್ಲೆ ಎಂಬುದೇ ಜ್ಞಾನಶಕ್ತಿಯ ಆವಿರ್ಭಾವ. ಅದುವೆ ಅ ಕಾರದ ಸ್ಫುರಣ. ನಂತರ ಸಂಕಲ್ಪಶಕ್ತಿ ಜಾಗೃತಗೊಂಡಿತು. ನಾನು ಜಗತ್ತನ್ನು ಸೃಷ್ಟಿಸಬೇಕು. ಎಂಬುದೇ ಸಂಕಲ್ಪ ಶಕ್ತಿಯ ಆವಿರ್ಭಾವ. ಇದೇ ಉ ಕಾರದ ಸ್ಫುರಣ. ನಂತರ ಕ್ರಿಯಾಶಕ್ತಿಯ ಸ್ಫುರಣ. ಇದೇ ಮಕಾರದ ಸ್ಫುರಣ. ಆಗ ಸೃಷ್ಟಿಕ್ರಿಯೆ ಆರಂಭ.

ಪ್ರಣವ ಪ್ರಕೃತಿ ಸೌಂಜ್ಞ : ದೇವರು ಸೃಷ್ಟಿಯನ್ನು ಮಾಡಿ ಅದಕ್ಕೆ ಅತೀತನಾಗಿ ನಿಂತು ಸೂತ್ರದ ಗೊಂಬೆಯನ್ನು ಸೂತ್ರಧಾರ ಆಡಿಸುವಂತೆ ಸೃಷ್ಟಿಯನ್ನು ಆಡಿಸುತ್ತಾನೆ. ಜಗನ್ಮಾತಾ ಅಕ್ಕಮಹಾದೇವಿಯು ಹೇಳುವಂತೆ ಕೋಲು ತುದಿಯ ಕೋಡಗದಂತೆ, ನೇಣಿನ ತುದಿಯ ಬೊಂಬೆಯಂತೆ ಈ ಸೃಷ್ಟಿಯು ದೇವರ ಕೈಯಲ್ಲಿ ಆಡುತ್ತದೆ.

ಪ್ರಣವ ಷಡಂಗ ಸಮರಸ : ದೇವರು ಸೂತ್ರಧಾರನಾಗಿ ಆಡಿಸುವುದಷ್ಟೇ ಅಲ್ಲ. ಸೃಷ್ಟಿಯಲ್ಲಿ ಹಾಸು ಹೊಕ್ಕಾಗಿ ಸಮರಸವಾಗಿದ್ದಾನೆ. ಷಡ್ಭೂತಗಳೆಂದರೆ ಪೃಥ್ವಿ, ಅಪ್, ತೇಜ, ವಾಯು, ಆಕಾಶ ಮತ್ತು ಆತ್ಮ.

ಈ ಚಿಕ್ಕ ವಚನದಲ್ಲಿ ಗುರು ಬಸವಣ್ಣನವರು ಲಿಂಗದೇವರ ಸಮಗ್ರ ಸ್ವರೂಪವನ್ನೇ ಚಿತ್ರಿಸಿದ್ದಾರೆ. ಮೊದಲು ಸ್ವಯಂಭುವಾಗಿ ನಂತರ ಸೃಷ್ಟಿಕರ್ತನಾಗಿ, ನಂತರ ಪ್ರಕೃತಿಯನ್ನು ಆಡಿಸುವ ಸೂತ್ರಧಾರನಾಗಿ, ನಂತರ ಹಾಲಿನಲ್ಲಿ ತುಪ್ಪವು ಓತಪ್ರೋತವಾಗಿ ಇರುವಂತೆ ಸೃಷ್ಟಿಯಲ್ಲಿ ಸಮರಸನಾಗಿ ದೇವರು ಇರುವ ವಿಶೇಷವನ್ನು ತಿಳಿಸಿದ್ದಾರೆ.

1021. ಲಿಂಗದೇವರ ನಾಮ ಅತಿ ಸುಖ

ಶರಣನು ಲಿಂಗದಲ್ಲಿ ಕೂಡಲು ಮಹಾಪದವಯ್ಯ
ದೃಢ ದೃಢಾಂಗಮಧ್ಯಸ್ಥನಾಗಿ, ಸಮರಸೈಕ್ಯ
ಲಿಂಗದೇವರ ನಾಮವತಿ ಸುಖವೆಂದುದು. –ಬವದೀ. 1024

ಭಾವಲಿಂಗೈಕ್ಯ ಎಂಬ ಒಂದು ಸ್ಥಿತಿ ಬರುವುದು. ಶರಣನು ಜೀವಂತವಿರುವಾಗಲೇ ಲಿಂಗಾಂಗ ಸಾಮರಸ್ಯ ಅನುಭವಿಸುವ ದಿವ್ಯ ಸ್ಥಿತಿ ಅದು. ಶರಣನು ಲಿಂಗದಲ್ಲಿ ಕೂಡಲು ಮಹದಾನಂದದಿಂದ ಕೂಡಿದ ಮಹಾಪದವು ಪ್ರಾಪ್ತವಾಗುವುದು. ಮಧ್ಯ ಸ್ಥಾನವಾದ ಹೃದಯದಲ್ಲಿ ಅಂಗ ಲಿಂಗಗಳೆರಡರ ಕೂಟವು ಸಾಧ್ಯವಾಗುವುದು. ಹೃದಯ ಕಮಲದ ಸಜ್ಜೆಯಲ್ಲಿ ದಿವ್ಯವಾದ ಸಾಮರಸ್ಯ ಘಟಿಸುವುದು. ಇನ್ನೇನೂ ಬೇಕೆನಿಸದು. ಲಿಂಗದೇವರ ದಿವ್ಯ ನಾಮಸ್ಮರಣೆಯೇ ಅತಿ ಸುಖಕಾರಕ ಎಂಬ ಅನುಭವ ಉಂಟಾಗುವುದು.

1022. ಆಚಾರವೇ ಸರ್ವಸ್ವ

ಆಚಾರವಿಡಿದು ಗುರು ಆಚಾರವಿಡಿದು ಲಿಂಗ
ಆಚಾರವಿಡಿದು ಜಂಗಮ ಆಚಾರವಿಡಿದು ಪ್ರಸಾದ
ಆಚಾರವಿಡಿದು ಭಕ್ತ, ಆಚಾರವಿಡಿದು ಶರಣ
ಆಚಾರವಿಲ್ಲದಿರ್ದಡೆ ಗುರುವಲ್ಲ : ನರನು.
ಆಚಾರವಿಲ್ಲದಿರ್ದಡೆ ಲಿಂಗವಲ್ಲ : ಪಾಷಾಣ.
ಆಚಾರವಿಲ್ಲದಿರ್ದಡೆ ಜಂಗಮವಲ್ಲ : ಅಶನಧಾರಿ.
ಆಚಾರವಿಲ್ಲದಿರ್ದಡೆ ಪ್ರಸಾದವಲ್ಲ : ಎಂಜಲು.
ಆಚಾರವಿಲ್ಲದಿರ್ದಡೆ ಭಕ್ತನಲ್ಲ : ಭವಿ,
ಆಚಾರವಿಲ್ಲದಿರ್ದಡೆ ಶರಣನಲ್ಲ : ಮರುಳು.
ಇಂತಿವೆಲ್ಲಕ್ಕೆಯೂ ಸದಾಚಾರವೇ ಕಾರಣ, ಲಿಂಗದೇವಾ. –ಬವದೀ. 1025

ಲಿಂಗಾಯತ ಧರ್ಮವು ಆಚಾರ ಪ್ರಧಾನವಾದ ಧರ್ಮ. ಸದಾಚಾರವೇ ಇದರ ಜೀವಾಳ. ಉದಾಹರಣೆಗೆ ಸ್ನಾನ. ಸ್ನಾನವು ಆಚಾರದಲ್ಲಿಯೇ ಸೇರಿ ಹೋಗಿದೆ. ಸ್ನಾನ, ಪೂಜೆ ಇವೆಲ್ಲವೂ ಸದಾಚಾರದ ಅವಿಭಾಜ್ಯ ಅಂಗಗಳು. ಶುಚಿತ್ವಕ್ಕಾಗಿ ಸ್ನಾನ ಎಂಬುದು ಭವಿ ಜನರ ನಂಬಿಕೆಯಾಗಿದ್ದರೆ ಸ್ನಾನವು ದೇವರನ್ನೊಲಿಸುವ ಸಾಧನ ಎಂಬುದು ಲಿಂಗಾಯತ ಧರ್ಮೀಯನ ನಂಬಿಕೆಯಾಗಿದೆ. ಆಚಾರದ ಮಾರ್ಗದಿಂದಲೇ ಗುರುವಿಗೆ ಗುರುತ್ವ ಪ್ರಾಪ್ತಿಯಾಗುತ್ತದೆ. ಗುರುವಾದವನು ನಿತ್ಯವೂ ಸ್ನಾನ, ಪೂಜಾದಿಗಳನ್ನು ನಿಯಮಿತವಾಗಿ ನೆರವೇರಿಸಬೇಕು. ಸ್ನಾನ–ಪೂಜೆಯಿಲ್ಲದೆ ಪ್ರಸಾದವನ್ನು ಸ್ವೀಕರಿಸಬಾರದು. ಸ್ನಾನ ಪೂಜೆಯಿಲ್ಲದೆ ಊಟ ಮಾಡುವ ಗುರುವನ್ನು ಅನಾಚಾರಿ ಎನ್ನಬೇಕಾಗುತ್ತದೆ. ಅಂಥ ಗುರುವನ್ನು ನರಮನುಷ್ಯ ಎಂದು ಕಾಣಬೇಕಾಗುವುದೇ ವಿನಾ ಗುರು ಎಂದು ಗೌರವಿಸಬೇಕಾಗಿಲ್ಲ.

ಇಷ್ಟಲಿಂಗಕ್ಕೆ ಒಂದು ಸ್ಥಾನಗೌರವವಿರಬೇಕು. ಅದು ಹೃದಯ ಕಮಲ ಮಧ್ಯದ ಪರಂಜ್ಯೋತಿಯ ಸಂಕೇತವಾದ ಕಾರಣ ಅದನ್ನು ಎದೆಯ ಮೇಲೆ ಧರಿಸಬೇಕು. ಹೊಕ್ಕುಳ ಕೆಳಗೆ ಬೀಳುವಂತೆ ಧರಿಸಬಾರದು. ಗೂಟಕ್ಕೆ ನೇತು ಹಾಕಬಾರದು. ಗುರುವು ಚಿತ್ಕಳೆ ತುಂಬಿ ಕೊಟ್ಟಿರುತ್ತಾನೆ. ಅದನ್ನು ಎತ್ತಿ ಇಡುವುದರಿಂದ ಆ ಚಿತ್ಕಳೆ ಪತನಗೊಳ್ಳುವುದು. ಆಚಾರವಿಲ್ಲದಿದ್ದಾಗ ಅದು ಲಿಂಗವಲ್ಲ ಶಿಲೆ ಎನ್ನಿಸಿಕೊಳ್ಳುವುದು. ಜಂಗಮನು ಆಚಾರ ಪ್ರಧಾನವಾದ ನಡತೆಯುಳ್ಳವನಾಗಿರಬೇಕು. ಅವನು

ಅನಾಚಾರಿಯಾಗಿದ್ದರೆ ಅವನನ್ನು ಹೊಟ್ಟೆಪಾಡಿಗಾಗಿ ಕಾವಿ ಲಾಂಛನ ತೊಟ್ಟ ಅಶನಧಾರಿ ಎಂದು ಅಲ್ಲಗಳೆಯಬೇಕಾಗುತ್ತದೆ.

ಪ್ರಸಾದ ತತ್ವಕ್ಕೆ ಲಿಂಗಾಯತ ಧರ್ಮದಲ್ಲಿ ಬಹು ಗಣ್ಯ ಸ್ಥಾನವುಂಟು. ನಿತ್ಯವೂ ಇಷ್ಟಲಿಂಗಾರ್ಚನೆ ಮಾಡಿ ಪ್ರಸಾದವನ್ನು ಸೇವಿಸುತ್ತೇವೆ. ಆಗಾಗ ಜಂಗಮಪೂಜೆ ಮಾಡಿ ಜಂಗಮರಿಂದ ಪ್ರಸಾದವನ್ನು ಸ್ವೀಕರಿಸಲಾಗುವುದು. ಹಾಗೆ ಕೊಡುವ ಜಂಗಮನು ಸದಾಚಾರಿಯಾಗಿರಬೇಕು ; ಪ್ರಸಾದವು ಶುಚಿಯಾಗಿ ಶುದ್ಧವಾಗಿರಬೇಕು. ಅನಾಚಾರಿಯಾದ ವ್ಯಕ್ತಿಯಿಂದ ಪಡೆದ ಪ್ರಸಾದವು ಎಂಜಲು ಆಗುವುದೇ ವಿನಾ ಪ್ರಸಾದವಾಗದು. ಸದಾಚಾರವಿಲ್ಲದಿದ್ದ ವ್ಯಕ್ತಿಯು ದೀಕ್ಷೆ ಪಡೆದು ಭಕ್ತನೇ ಆಗಿದ್ದರೂ ಅವನು ಭವಿ ಎನ್ನಿಸಿಕೊಳ್ಳುವನು. ಆಚಾರವಿಲ್ಲದೆ ಇದ್ದರೆ ಓರ್ವ ವ್ಯಕ್ತಿಯು ಶರಣನೇ ಆಗಿದ್ದರೂ ಅವರು ಮರುಳು ಅಥವಾ ಹುಚ್ಚ ಎನ್ನಿಸಿಕೊಳ್ಳುವನು. ಕೆಲವರು ಅವಧೂತ ಮಾರ್ಗಿಗಳು, ಆರೂಢ ಮಾರ್ಗಿಗಳು ಎಂದು ಆಚಾರವಿಹೀನರಾಗಿ ನಡೆದುಕೊಳ್ಳುವರು. ಸ್ನಾನ ಪೂಜೆಯಿಲ್ಲದೆ ತಿನ್ನುವರು ಕುಡಿಯುವರು. ಕೆಲವರು ಎಷ್ಟೋ ದಿನಗಟ್ಟಳೆ ಸ್ನಾನವನ್ನೇ ಮಾಡುವುದಿಲ್ಲ; ಭಂಗಿ ಅಫೀಮು ಸೇದುವರು. ತಾವು ಬ್ರಹ್ಮಜ್ಞಾನಿಗಳೆಂದು ಬೀಗುವರು. ಅನಾಚಾರಿ ಗುರುವಿಗೆ ಅನಾಚಾರಿ ಶಿಷ್ಯರು ಸೇರಿಕೊಂಡು ಅಂಥ ಗುರುಗಳನ್ನು ವೈಭವೀಕರಿಸುವರು. ಇಂಥ ಅನಾಚಾರಿ ಗುರು, ಭಕ್ತ, ಜಂಗಮ, ಶರಣರನ್ನು ಮರುಳುಗಳೆಂದು ಗುರು ಬಸವಣ್ಣನವರು ಜರಿದಿದ್ದಾರೆ.

1023. ಬಾಗಿದ ತಲೆ ಮುಗಿದ ಕೈ

ಎನಗೆ ನಾನೇ ಹಗೆ ನೋಡಯಾ,
ಎನಗೆ ನಾನೇ ಕೆಳೆ ನೋಡಯ್ಯಾ !
ನಿಮ್ಮ ಸದ್ಭಕ್ತರೊಡನೆ ವಿರೋಧ ಮಾಡಿದಡೆ ಎನ್ನ ಕೊಲುವುದಾಗಿ,
ನಿಮ್ಮ ಪುರಾತರಿಗಂಜಿ ಬೆಸಗೊಂಡಡೆ ಎನ್ನ ಕಾಯ್ವುದಾಗಿ
ಅನ್ಯ ಹಗೆ ಎಲ್ಲಿ, ಅನ್ಯ ಕೆಳೆಯೆಲ್ಲಿ ?
ಬಾಗಿದ ತಲೆಯ, ಮುಗಿದ ಕೈಯಾಗಿರಿಸು, ಲಿಂಗದೇವಾ. –ಬವದೀ. 1026

ಗುರು ಬಸವಣ್ಣನವರ ಪ್ರಸಿದ್ಧ ಮತ್ತು ಜನಪ್ರಿಯ ವಚನಗಳಲ್ಲಿ ಇದೂ ಒಂದು. ಇದರಲ್ಲಿ ಒಂದು ವಿಶ್ವಸಂದೇಶವಿರುವುದಷ್ಟೆ ಅಲ್ಲ ಗುರು ಬಸವಣ್ಣನವರು ತಮ್ಮ ವೈಯಕ್ತಿಕ ಜೀವನದಲ್ಲಿ ಹೇಗಿದ್ದರು ಎಂಬುದರ ಚಿತ್ರಣ ನೀಡುತ್ತದೆ. ಈ ಜಗತ್ತಿನಲ್ಲಿ ತಾನೇ ತನಗೆ ಶತ್ರು, ತಾನೇ ತನಗೆ ಮಿತ್ರ, ಸತ್ಯವಾದಿಗಳು ಸಜ್ಜನರು ಆದವರೊಡನೆ ವಿರೋಧ ಮಾಡಿದರೆ ಆ ವಿರೋಧವು ನಾಶಕ್ಕೆ ಕಾರಣವಾಗುವುದು. ಶರಣರಿಗೆ ಅಂಜಿ ವಿಧೇಯತನದಿಂದ ವರ್ತಿಸಿದರೆ ಅದು ರಕ್ಷಣೆ ಮಾಡುತ್ತದೆ. ತನ್ನ ವರ್ತನೆಯೇ ತನಗೆ ಶತ್ರುತ್ವ ಮತ್ತು ಮಿತ್ರತ್ವವನ್ನು ತಂದುಕೊಡುವುದು. ಆದ್ದರಿಂದ ಲಿಂಗದೇವಾ, ತಲೆ ಸದಾ ಬಾಗಿರಲಿ ವಿನಯದಿಂದ ; ಕೈಯಿ ಮುಗಿದಿರಲಿ ಕಿಂಕರತೆಯಿಂದ. ವಿನಯ ಎಂಬುದು ಒಂದು ಸನ್ನಡತೆ, ಶಿಷ್ಟಾಚಾರ. ವ್ಯಕ್ತಿತ್ವಕ್ಕೆ ಭೂಷಣ.

1024. ಯಾಂತ್ರಿಕ ಭಕ್ತಿ ಸಲ್ಲದು

ಲಿಂಗವಿರದೆ ಸೀಮೆಯ ಕಲ್ಲಿನಲ್ಲಿ ?
ಲಿಂಗವಿರದೆ ಪಶುವಿನ ತೊಡೆಯಲ್ಲಿ ?
ಕಲ್ಲ ತೆಕ್ಕೊಂಡು ಮೆಳೆಯ ಮೇಲೆ ಇಟ್ಟಡೆ
ಆ ಕಲ್ಲು ಮೆಳೆಯಲ್ಲಿ ಸಿಕ್ಕಿದಡೆ ಆ ಮೆಳೆ ಭಕ್ತನಾಗಬಲ್ಲುದೆ ?
ಇದು ಕಾರಣ ಸತ್ಯ, ಸಹಜ, ಸದ್ಭಾವ, ಸದ್ವರ್ತನೆ ಉಳ್ಳಡೆ ಸದ್ಭಕ್ತ
ಇಲ್ಲದಿದ್ದಡೆ ಆ ಮೆಳೆಯೊಳಗೆ ಸಿಕ್ಕಿದ ಕಲ್ಲಿನಂತೆ
ಕಾಣಾ ಲಿಂಗದೇವಾ. –ಬವದೀ. 1027

ಹಿಂದಿನ ಕಾಲದಲ್ಲಿ ಪ್ರತಿಯೊಂದು ವಸ್ತುವಿಗೂ ಧಾರ್ಮಿಕ ಸಂಸ್ಕಾರ ಕೊಡುತ್ತಿದ್ದರು. ಒಂದು ಹೊಲವನ್ನು ಕೊಂಡುಕೊಂಡರೆ ಅದಕ್ಕೆ ಲಿಂಗ ಮುದ್ರೆಯ ಕಲ್ಲುಗಳನ್ನು ಗಡಿ ಗುರುತಿಸಲು ಹಾಕುತ್ತಿದ್ದರು.

ಕೆಳದಿ ರಾಜರು ಹೊಸ ಪ್ರದೇಶಗಳನ್ನು ಗೆದ್ದುಕೊಂಡಾಗ ಗಡಿಗಳನ್ನು ಗುರುತಿಸಲು ಲಿಂಗಮುದ್ರೆ ಕಲ್ಲುಗಳನ್ನು ಹಾಕುತ್ತಿದ್ದರು ಎಂದು ಕೇಳುತ್ತೇವೆ. ಹಾಗೆಯೇ ಹಸುಗಳನ್ನು ಕೊಂಡಾಗ ಅಥವಾ ಮನೆಯಲ್ಲಿ ಹುಟ್ಟಿದ ಕರುವು ವಯಸ್ಸಿಗೆ ಬಂದಾಗ ಅದಕ್ಕೆ ಲಿಂಗಮುದ್ರೆ ಹಾಕುತ್ತಿದ್ದರು. ಕೆಲವು ಶರಣರು ದನಗಳಿಗೆ ರುದ್ರಾಕ್ಷಿ ಸಹ ಕಟ್ಟುತ್ತಿದ್ದರೆಂದು ಕೇಳುತ್ತೇವೆ. ಒಂದು ಕಲ್ಲನ್ನು ತೆಗೆದುಕೊಂಡು ಬಿದಿರಿನ ಮೆಳೆಗೆ ಸಿಕ್ಕಿಸಿದಡೆ ಮೆಳೆಯು ಭಕ್ತನಾಗಲಿಲ್ಲ, ಶಿಲೆ ಲಿಂಗವಾಗಲಿಲ್ಲ. ಹಾಗೆ ಯಾಂತ್ರಿಕವಾಗಿ ಲಿಂಗವನ್ನು ಧಾರಣೆ ಮಾಡಿಕೊಂಡರೆ ಅವನು ಭಕ್ತನಾಗಲಿಲ್ಲ. ಧರಿಸಿಕೊಂಡದ್ದು ಲಿಂಗವಾಗಲಿಲ್ಲ. ಎಲ್ಲಿ ಸತ್ಯತೆ, ಸಹಜತೆ, ಸದ್ಭಾವ, ಸದ್ವರ್ತನೆ ಇರುವುದೋ ಅವನು ಸದ್ಭಕ್ತ. ಇಲ್ಲದಿದ್ದರೆ ಅವನ-ಲಿಂಗದ ಸಂಬಂಧ ಮೆಳೆಗೆ ಸಿಕ್ಕಿಸಲ್ಪಟ್ಟ ಕಲ್ಲಿನಂತೆ.

1025 . ಭಕ್ತಿ ಮುಖ್ಯ

ವಾಸನೆ ಕಾರಣ ನೊಣವಿನ ಮಲ ಜೇನುತುಪ್ಪವೆಂದೆನಿಸಿತ್ತು
ಪರಿಮಳ ಕಾರಣ ಕೋಣನ ಮಾಂಸ ವಾಣಿಜ್ಯತೆ ಇಂಗು ಎನಿಸಿತ್ತಯ್ಯ
ಭಕ್ತಿ ಕಾರಣ ಎನ್ನಲುಳ್ಳ ಅವಗುಣ ಹಿಂಗಿತ್ತು ಕಾಣಾ, ಲಿಂಗದೇವಾ.

–ಬವದೀ. 1028

ಸುವಾಸನೆ ಮತ್ತು ಔಷಧಿಯ ಗುಣಗಳಿಂದಾಗಿ ಜೇನು ನೊಣದ ವಿಸರ್ಜಿತ ಮಲವು ಜೇನುತುಪ್ಪ ಎನಿಸಿಕೊಂಡು ಚಿಕಿತ್ಸೆಗಾಗಿ ಬಳಕೆಯಾಗುವುದು. ಆಯುರ್ವೇದದಲ್ಲಿ ಜೇನುತುಪ್ಪಕ್ಕೆ ಬಹಳ ಪ್ರಾಮುಖ್ಯತೆಯುಂಟು. ಒಂದು ವಿಶಿಷ್ಟ ಜಾತಿಯ ಕೋಣನ ಮಾಂಸವು ಒಣಗಿದಾಗ ಸುವಾಸನೆ ಬೀರುವ ಕಾರಣ ಇಂಗು ಎನ್ನಿಸಿಕೊಂಡು ವ್ಯಾಪಾರಿಕ ಮೌಲ್ಯವನ್ನು ಹೊಂದಿ ಇರುವುದು, ಅಡಿಗೆಗೆ ಉಪಯೋಗಿಸಲ್ಪಡುವುದು. ಜೇನುತುಪ್ಪವು ಜೇನು ಹುಳದ ಮಲ, ಇಂಗು ಕೋಣನ ಮಾಂಸ. ಆದರೂ ವಾಸನೆಯ ಕಾರಣದಿಂದ ಪ್ರಯೋಜನಕಾರಿಯಾಗಿವೆ. ಹಾಗೆ ವ್ಯಕ್ತಿಯಲ್ಲಿ ಅನೇಕ ರೀತಿಯ ಅವಗುಣಗಳು ಇದ್ದರೂ ಭಕ್ತಿ ಎಂಬುದಿದ್ದರೆ ಅವನು ಪರಮಾತ್ಮನಿಗೆ ಪ್ರಿಯವಾಗುವನು; ಸಮಾಜಕ್ಕೆ ಬೇಕಾದವನಾಗುವನು. "ನನ್ನಲ್ಲಿ ಭಕ್ತಿ ಎಂಬುದಿದೆ ಎಂಬ ಕಾರಣದಿಂದಲೇ ನನ್ನಲ್ಲಿರುವ ಅವಗುಣಗಳನ್ನು ಶರಣರು ಕಡೆಗಣಿಸುತ್ತಿದ್ದಾರೆ ಎನಿಸುತ್ತಿದೆ." ಎನ್ನುತ್ತಾರೆ ಧರ್ಮಪಿತರು.

1027. ಬಾಳೆ ಬಿತ್ತುವುದು

ಬಾಗಿಲ ಮುಂದೆ ಬಾಳೆ ಬಿತ್ತುವುದು
ಬಾಳೆ ಗೊನೆಯಾಗದ ಮುನ್ನ
ಕೂಡಿಕೊಳ್ಳಿ ಲಿಂಗದೇವನ.

–ಬವದೀ. 1029

ಧಾರ್ಮಿಕ ಜಗತ್ತಿನಲ್ಲಿ ಬಾಳೆಗೆ ಮಹತ್ವಪೂರ್ಣ ಸ್ಥಾನವಿದೆ. ಪೂಜೆಗೆ ಒಯ್ಯುವುದು ಬಾಳೆಹಣ್ಣು, ಗುರುಗಳ ದರ್ಶನಕ್ಕೆ ಒಯ್ಯುವುದು ಬಾಳೆಯ ಹಣ್ಣು. ಕಾರಣವೇನೆಂದರೆ ಬಾಳೆಗೆ ಬೀಜವಿಲ್ಲ. ಬಾಳೆ ಹಣ್ಣನ್ನು ಬಿತ್ತಿ ಹೊಸ ಬೆಳೆಯನ್ನು ಪಡೆಯುವುದಿಲ್ಲ. ಬಾಳೆಯಲ್ಲಿ ಬೀಜವಿಲ್ಲದೆ ಇರುವುದರಿಂದ ಪೂರ್ತಿಯಾಗಿ ತಿನ್ನಲು ಬರುವುದು. ಹೀಗಾಗಿ ದೀಕ್ಷೆ ಕೊಟ್ಟಾಗ ನಾವು ಬಾಳೆಹಣ್ಣನ್ನು ಸುಲಿದು ಕೊಡುತ್ತೇವೆ.

ಬಾಗಿಲ ಮುಂದೆ ಅಂದರೆ ಜೀವನದಲ್ಲಿ, ಅತಿ ಮುಖ್ಯವಾಗಿ ಬಾಳೆಯನ್ನು ಅರ್ಥಾತ್ ಭಕ್ತಿಯನ್ನು ಬಿತ್ತುವುದು. ಆ ಭಕ್ತಿ ಬೆಳೆದು ಮುಕ್ತಿ ಎಂಬ ಫಲವನ್ನು ಕೊಡುವುದು. ಜೀವನ್ಮುಕ್ತಿ ಎಂದರೆ ಇದ್ದಾಗಲೇ ಮಾನಸಿಕವಾಗಿ ಬಿಡುಗಡೆ ಹೊಂದಿರುವುದು. ವಿದೇಹ ಮುಕ್ತಿ ಎಂದರೆ ಸತ್ತ ನಂತರ ಬಿಡುಗಡೆ ಹೊಂದುವುದು. ಈ ಬಿಡುಗಡೆ ಎಂಬ ಸ್ಥಿತಿ ಪ್ರಾಪ್ತಿಯಾಗುವ ಮುನ್ನವೇ ಅಂದರೆ ಬಾಳೆ ಫಲವನ್ನು ಬಿಡುವ ಮುನ್ನವೇ ಲಿಂಗದೇವನನ್ನು ಕೂಡಿಕೊಳ್ಳುವ ಅಂದರೆ ಲಿಂಗಾಂಗ ಸಾಮರಸ್ಯದ ಅನುಭವ ಪಡೆಯುವಂತಾಗಬೇಕು.

1028. ಲಿಂಗಪೂಜೆ-ಶರಣ ದರ್ಶನ

ಮುಂಜಾವದಲೆದ್ದು ಲಿಂಗದಂಘ್ರಿಯ ಮುಟ್ಟಿ
ಸುಪ್ರಭಾತದಲ್ಲಿ ಶಿವಶರಣರ ಮುಖವ ನೋಡುವುದು.
ಹುಟ್ಟಿದ ಜನ್ಮಕ್ಕಿದೆ ಸಫಲವು.
ಸತ್ಯವಚನವಿಂತೆಂದುದಾಗಿ
ಇಂತಿಲ್ಲದವರನೊಲ್ಲ. ನಮ್ಮ ಲಿಂಗದೇವ. –ಬವದೀ. 1030

ಸುಪ್ರಭಾತ ಸಮಯದಲ್ಲಿ ಎದ್ದು ಮೊಟ್ಟ ಮೊದಲು ಮಾಡಬೇಕಾದ್ದು ಇಷ್ಟಲಿಂಗಪೂಜೆ. ಶೌಚಾದಿ ಕ್ರಿಯೆಯನ್ನು ಪೂರೈಸಿ, ಸ್ನಾನ ಮಾಡಿ ಮಡಿವಸ್ತ್ರಗಳನ್ನುಟ್ಟು ಬೇರೇನೂ ವ್ಯವಹಾರದಲ್ಲಿ ತೊಡಗದೆ ಇಷ್ಟಲಿಂಗಾರ್ಚನೆ ಮಾಡಬೇಕು. ಕೆಲವರು ಮುಖ ತೊಳೆದು ಕಾಫಿ, ಟೀ ಕುಡಿದು ಮನೆ ಕೆಲಸ ಎಲ್ಲ ಮಾಡಿ, ಸ್ನಾನ-ಪೂಜೆ ಇಲ್ಲದೆ ಅಡಿಗೆಯನ್ನು ಪೂರೈಸಿ ಮಧ್ಯಾಹ್ನ ಒಂದೆರಡು ಗಂಟೆಗೆ ಸ್ನಾನ ಮಾಡುವರು. ಕೆಲಸ ಮಾಡುವುದರಿಂದ ಬಟ್ಟೆ ಕೊಳೆಯಾಗುವುದಾದ್ದರಿಂದ ಕೆಲಸ ಮುಗಿಸಿ ಸ್ನಾನ ಮಾಡುವುದಾಗಿ ಹೇಳುವರು. ಇದು ತಪ್ಪು. ಸ್ನಾನ ಮಾಡಿ ಸಂಕ್ಷಿಪ್ತವಾಗಿಯಾದರೂ ಲಿಂಗಪೂಜೆ ಮುಗಿಸಿ ಮನೆಯ ಕೆಲಸ ಮಾಡಿಕೊಳ್ಳಬೇಕು. ಅನಾಚಾರದಿಂದ ಮನೆಯ ವಾತಾವರಣ ಕೆಡುವುದು. ಸದಾಚಾರದಿಂದ ಮಂಗಳಮಯ ವಾತಾವರಣ ನೆಲೆಸಿ ಮನೆಯಲ್ಲಿ ಶಾಂತಿ ಅಳವಡುವುದು.

ಲಿಂಗಪೂಜೆಯ ನಂತರ ಗುರುಗಳು, ಜಂಗಮ ಮೂರ್ತಿಗಳು ಲಭ್ಯವಿದ್ದರೆ ಅವರಿಗೆ ನಮಸ್ಕರಿಸಿ, ದರ್ಶನ ಪಡೆಯಬೇಕು. ಅಂಥವರು ಲಭ್ಯವಿಲ್ಲದಿದ್ದರೆ ಇತರ ಶರಣರನ್ನು ಕಂಡು ಶರಣು ಶರಣಾರ್ಥಿ ಸಲ್ಲಿಸಬೇಕು. ಮಾನವನಾಗಿ ಹುಟ್ಟಿ ಬಂದ ಮೇಲೆ ಇದರಲ್ಲೇ ಜನ್ಮದ ಸಾಫಲ್ಯವಿದೆ. ಇದು ಗುರು ಬಸವಣ್ಣನವರ ಸತ್ಯ ವಚನ. ಈ ಆಚರಣೆ ಅಳವಡಿಸಿಕೊಳ್ಳದವರನ್ನು ಲಿಂಗದೇವನೊಲ್ಲ.

ಅಮೇರಿಕಾ ಜನರು ಪರಿಚಯವಿರಲಿ ಇಲ್ಲದಿರಲಿ ಭೇಟಿಯಾದಾಗ ಮುಗುಳ್ನಕ್ಕು ಹಾಯ್ ಎನ್ನುತ್ತಾರೆ. ಹಾಗೆಯೇ ಶರಣ ಸಂಸ್ಕೃತಿಯವರು ಇತರರನ್ನು ಕಂಡಾಗ ಶರಣು ಎನ್ನಬೇಕು.

1029. ಲಿಂಗಪೂಜೆಯ ವೇಳೆ

ಗಾಂಧಾರಿ ಮಾಂಧಾರಿಯೆಂಬ ಅಹೋರಾತ್ರಿಯಲ್ಲಿ
ಲಿಂಗವ ಪೂಜಿಸಬೇಕು.
ಊರ ಕೋಳಿ ಕೂಗದ ಮುನ್ನ, ಕಾಡ ನವಿಲು ಒದರದ ಮುನ್ನ
ತುಂಬಿ ಮುಟ್ಟಿ ಪುಷ್ಪ ನಿರ್ಮಾಲ್ಯವಾಗದ ಮುನ್ನ
ಲಿಂಗವ ಪೂಜಿಸಬೇಕು.
ತನ್ನೊಡನೆ ಮಲಗಿರ್ದ ಸತಿಯನೆಬ್ಬಿಸದೆ ಶಿವಲಿಂಗಕ್ಕೆರೆವ
ಸದ್ಭಕ್ತನ ಶ್ರೀಪಾದವ ತೋರಿ ಬದುಕಿಸಯ್ಯಾ, ಲಿಂಗದೇವಾ

–ಬವದೀ. 1031

ಹಗಲು ರಾತ್ರಿಗಳನ್ನು ಜಾವಗಳ ಮೂಲಕ ಅಳೆಯುವರು. ಹಗಲಿನಲ್ಲಿ ನಾಲ್ಕು ಜಾವ, ರಾತ್ರಿಯಲ್ಲಿ ನಾಲ್ಕು ಜಾವ ಎಂದು ವಿಂಗಡಿಸುವರು. ಉದಾ:

'ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು,
ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು
ಅಗಸ ನೀರೊಳಗಿದ್ದು ಬಾಯಾರಿ ಸತ್ತಂತೆ
ತಮ್ಮೊಳಗಿದ್ದ ಮಹಾಘನವನರಿಯರು ಚನ್ನಮಲ್ಲಿಕಾರ್ಜುನಾ.

– ಅಕ್ಕಮಹಾದೇವಿಯ ವಚನ

ಇಂದಿನ ಮೂರು ಗಂಟೆಗೆ ಒಂದು ಜಾವ. ಬೆಳಗಿನ ಆರರಿಂದ ಸಂಜೆ 6ರವರೆಗೆ ಹಗಲು, ಸಂಜೆ 6ರಿಂದ ಮರುದಿನ ಬೆಳಗಿನ ಆರರವರೆಗೆ ಇರುಳು. ಜಾವಗಳಲ್ಲಿ ಗಳಿಗೆಗಳನ್ನು ಗುರುತಿಸಲಾಗುವುದು. ಗಾಂಧಾರಿ, ಮಾಂಧಾರಿ ಎಂಬುವುವು ಬೆಳಗಿನ ಜಾವದ ಗಳಿಗೆಗಳು. ಹಗಲು ಮಾನವರ ಸಂಚಾರ, ರಾತ್ರಿ

12ರಿಂದ 3ರವರೆಗೆ ನಿಶಾಚರರ (ಪೈಶಾಚಿಕ ಶಕ್ತಿಗಳ) ಸಂಚಾರ (ಕಳ್ಳಕಾಕರು ನಿಶಾಚರರೇ ಅಹುದು) ಬೆಳಗಿನ 3 ಗಂಟೆಯಿಂದ ಬ್ರಾಹ್ಮೀ ಮುಹೂರ್ತ ಪ್ರಾರಂಭ. ಅದು ದೈವೀ ಮಾನವರ ಸಂಚಾರದ ಸಮಯ ಎಂದು ಹೇಳಲಾಗುವುದು. ವೈಜ್ಞಾನಿಕವಾಗಿ ನೋಡಿದರೆ ರಾತ್ರಿ 12ರಿಂದ 3ರವರೆಗೆ ವಾತಾವರಣ ಉಗ್ರವಾಗಿಯೂ, ಭಯಾನಕವಾಗಿಯೂ ಇರುವುದು. 3ರ ನಂತರ ಆಹ್ಲಾದಕರವಾಗಿ ತಂಗಾಳಿಯು ಬೀಸಿ ವಾತಾವರಣ ಪ್ರಸನ್ನವಾಗುವುದು. ಇಂಥ ಸಮಯದಲ್ಲಿ ಬರುವ ಗಳಿಗೆಗಳು ಗಾಂಧಾರಿ ಮತ್ತು ಮಾಂಧಾರಿ. ಇಂದಿನ ಒಂದೂವರೆ ಗಂಟೆ ಒಂದು ಗಳಿಗೆಯಾಗುವುದು. ಬೆಳಗಿನ ಮೂರರಿಂದ ನಾಲ್ಕೂವರೆಯವರೆಗೆ ಗಾಂಧಾರಿ, ನಾಲ್ಕೂವರೆಯಿಂದ ಆರರವರೆಗೆ ಮಾಂಧಾರಿ. ಈ ಸಮಯದಲ್ಲಿ ಇಷ್ಟಲಿಂಗವನ್ನು ಅರ್ಚಿಸಬೇಕು ಎಂದು ಧರ್ಮಪಿತರು ಹೇಳುತ್ತಾರೆ.

ಸೂರ್ಯೋದಯದ ಸಮಯದಲ್ಲಿ ಕೋಳಿಗಳು ಕೂಗುತ್ತವೆ. ಸೂರ್ಯೋದಯವಾಗುವುದು ಎನ್ನುವ ಬಗ್ಗೆ ಮುನ್ಸೂಚನೆಯನ್ನು ಕೂಗುವ ಮೂಲಕ ನೀಡುತ್ತವೆ. ಅದೇ ರೀತಿ ಕಾಡಿನಲ್ಲಿ ಅಲೆದಾಡುವ ನವಿಲುಗಳೂ ಕುಕುಲಿರಿದು ಹರ್ಷಿಸುತ್ತವೆ. ಊರ ಕೋಳಿ ಕೂಗದ ಮುನ್ನ, ಕಾಡ ನವಿಲು ಒದರದ ಮುನ್ನ ಅಂದರೆ ಸೂರ್ಯೋದಯವಾಗುವ ಮುನ್ನವೇ ಲಿಂಗವ ಪೂಜಿಸಬೇಕು ಎನ್ನುತ್ತಾರೆ. ಧರ್ಮಪಿತರ ಶಬ್ದ ಸಂಪತ್ತು ಅಗಾಧ. ನವಿಲಿನದು ಕರ್ಕಶ ಧ್ವನಿ ಅದಕ್ಕೆ ನವಿಲು ಒದರುತ್ತದೆ ಎಂದು ಪದ ಬಳಕೆ ಮಾಡಿದ್ದಾರೆ. ಸೂರ್ಯೋದಯಕ್ಕೆ ಮೊದಲು ಆಕಾಶದಲ್ಲಿ ಕೆಂಪುಗೆರೆ ಮೂಡಿದಾಗ ಇರುಳು ಸರಿದು ಬೆಳಕು ಹರಿಯುತ್ತದೆ ಎಂಬ ಸೂಚನೆ ಮೂಡುವಾಗ ಮುಸಲೀಮರು ನಮಾಜ್ ಮಾಡುತ್ತಾರೆ. ಗುರು ಬಸವಣ್ಣನವರ ಕಾಲದಲ್ಲಿ ಇನ್ನೂ ಮುಸಲೀಮರು ಸಾಮೂಹಿಕವಾಗಿ ಆ ಪ್ರದೇಶವನ್ನು ತಲ್ಪಿರಲಿಲ್ಲ. ಕೆಲವು ಫಕೀರರು ಮಾತ್ರ ಅಲ್ಲಲ್ಲೇ ವೈಯಕ್ತಿಕವಾಗಿ ಸಂಚರಿಸುತ್ತಿದ್ದಿರಬೇಕು. ಭಾರತ ದೇಶದವರು ಗೋವುಗಳನ್ನು ಕೊಲ್ಲುತ್ತಿರಲಿಲ್ಲ. "ಗೋವುಗಳ ಕೊಲುವ ಪಾಪಿಯ ದನಿಯ ಕೇಳದ ಮುನ್ನ"ಎಂಬ ವಾಕ್ಯದಿಂದ ಊಹಿಸಬಹುದೆಂದರೆ ಗೋವುಗಳನ್ನು ಕೊಲ್ಲುವುದು ಪಾಪದ ಕೆಲಸವೆಂದು, ಅದನ್ನು ಮಾಡುವವರು ಬೆಳಗಿನ ಪ್ರಾರ್ಥನೆ (ನಮಾಜ್) ಮಾಡುತ್ತಾರಲ್ಲ ಅದು ಕಿವಿಗೆ ಬೀಳುವ ಮೊದಲೇ ಇಷ್ಟಲಿಂಗ ಪೂಜೆ ಮಾಡಬೇಕು ಎಂಬುದಾಗಿ. ಸೂರ್ಯನ ಕಿರಣಗಳು ಭೂಮಿಗೆ ಬೀಳುತ್ತಲೇ ತುಂಬಿ, ಪತಂಗ, ಚಿಟ್ಟೆ ಮೊದಲಾದ ಕೀಟಗಳು ಹಾರಾಡತೊಡಗುವುವು. ತುಂಬಿಯು ಹೂವಿನ ಮಕರಂದ ಪಾನ ಮಾಡಲು ಯತ್ನಿಸುವ ಮೊದಲೇ ಇಷ್ಟಲಿಂಗಪೂಜೆ ಮಾಡಬೇಕು.

ಗೃಹಸ್ಥರು ಪತಿ, ಪತ್ನಿಯ ಜೊತೆಗೆ ಮಲಗಿರುವವರಷ್ಟೆ. ಗಂಡನಿಗೆ ಪೂಜೆಯು ಇಷ್ಟವಿದ್ದರೆ ಹೆಂಡತಿಗೆ ಇರಲಿಕ್ಕಿಲ್ಲ. ಹೆಂಡತಿಗೆ ಆಸಕ್ತಿ ಇದ್ದರೆ ಗಂಡನಿಗೆ ಆಸಕ್ತಿ ಇರಲಿಕ್ಕಿಲ್ಲ. ಆಗ ಆಸಕ್ತಿ ಇರುವ ಪತಿ (ಪತ್ನಿ) ತನ್ನೊಡನೆ ಮಲಗಿರುವ ಸತಿ(ಪತಿ)ಯನ್ನೆಬ್ಬಿಸದೆ ತಾನು ಎದ್ದು ಹೋಗಿ ಸ್ನಾನ-ಪೂಜೆ ಮಾಡಬೇಕು. ಇಂತಹ ಸದ್ಭಕ್ತರನ್ನು ನನಗೆ ತೋರಿಸು ಎಂದು ಧರ್ಮಪಿತರು ಲಿಂಗದೇವನಲ್ಲಿ ಬೇಡುತ್ತಾರೆ. ಅಂದರೆ ಇದರರ್ಥ ಬೆಳಗಿನ ಜಾವ ಪೂಜೆ ಮಾಡುವವರು ಪರಮ ಪಾವನರು, ಶ್ರೇಷ್ಠರು ಎಂದು.

1030. ಭವಿತ್ವದ ತೊರೆಯುವಿಕೆ

ಇಹದ ಪೂರ್ವವ ಜರಿದು, ಪರದ ಪೂರ್ವವನರಿದು
ಗುರುಕಾರುಣ್ಯವ ಪಡೆದು, ಅಂತರ್ಬಾಹ್ಯದ ಭವಿಯ ತೊರೆದು
ಭಕ್ತಿಪರಾಯಣರಾಗಿ ನಿಂದುದೆ ಲಿಂಗದ ನಿಜಲಿಂಗ
ಅಂತರಂಗದ ಭವಿಯನು ಹಿಂಗಿ
ಮಾನವರಂಗದ ಭವಿಯನು ಕಳೆದು
ಬಹಿರಂಗದ ಭವಿಯನು ತೊಲಗಿಸಿ
ಇಂತೀ ತ್ರಿವಿಧ ಭವಿಯನು ದೂರಮಾಡಿ
ಶಿವಭಕ್ತಿಯೇ ಅಂಗವಾದ ಲಿಂಗೈಕ್ಯ ಲಿಂಗಪೂಜಕರಿಗೆ
ಪೂರ್ವವರ್ಣಾಶ್ರಮಾದಿ ಸೂತಕವಿಲ್ಲ. ಲಿಂಗದೇವಯ್ಯಾ —ಬವದೀ. 1032

ಇಹದ ಪೂರ್ವ ಎಂದರೆ ವಿವಿಧ ಜಾತಿಗಳಿಂದ ಬಂದವರು ದೀಕ್ಷಾ ನಂತರ ದೀಕ್ಷಾ ಪೂರ್ವದ ಜಾತಿಗಳವರೊಡನೆ ಬೆರೆಯಬಾರದು. ಸಾಧಕರು ತಮ್ಮ ಪೂರ್ವಾಶ್ರಮದವರೊಡನೆ ಒಡನಾಟ

ಇಟ್ಟುಕೊಳ್ಳಬಾರದು. ಅಧ್ಯಾತ್ಮಿಕ ಪಥದ ಗುಟ್ಟನ್ನು ತಿಳಿದು ಗುರು ಕಾರುಣ್ಯವನ್ನು ಪಡೆಯಬೇಕು. ಒಳಹೊರಗಿನ ಭವಿಗಳನ್ನು ತೊರೆಯಬೇಕು. ಭವಿಗಳಲ್ಲಿ ಮೂರು ಪ್ರಕಾರ. 1.ಅಂತರಂಗದ ಭವಿ. 2. ಅಂಗದ ಭವಿ 3.ಬಹಿರಂಗದ ಭವಿ ಎಂಬುದಾಗಿ. ಕಾಮಕ್ರೋಧಲೋಭಮೋಹ ಮದ ಮತ್ತು ಮತ್ಸರ ಎಂಬ ಅರಿಷಡ್ವರ್ಗಗಳೇ ಅಂತರಂಗದ ಭವಿಗಳು. ಶರೀರದ ಮಾಲಿನ್ಯ, ನಿದ್ರೆ, ಸೋಮಾರಿತನ ಇವೇ ದೇಹವನ್ನು ಬಾಧಿಸುವ ಭವಿಗಳು. ದುರ್ಜನರು, ಧಾರ್ಮಿಕ ಅನಾಸಕ್ತರು ಭಹಿರಂಗದ ಭವಿಗಳು. ಈ ಮೂರನ್ನೂ ಸಾಧಕರು ದೂರುವಿಡಬೇಕು. ಧಾರ್ಮಿಕ ಅನಾಸಕ್ತರೊಡನೆ ನಿರಂತರವಾಗಿ ಒಡನಾಡಿದರೆ ಇವರಲ್ಲಿರುವ ಶ್ರದ್ಧೆಯೂ ಸಡಿಲವಾಗಬಹುದು. ಶಿವಭಕ್ತಿಯನ್ನೇ ತನ್ನ ಒಡಲಲ್ಲಿ ತುಂಬಿಕೊಂಡ ಸದ್ಭಕ್ತನು ನಿಜವಾದ ಲಿಂಗಪೂಜಕ. ಇವನಿಗೆ ಯಾವುದೇ ಸೂತಕಗಳು ಇರುವುದಿಲ್ಲ. (ಮುಂದುವರಿಯುವುದು)

ಬಸವ ಧರ್ಮದ ಉದಯ ಮತ್ತು ಪುನರುತ್ಥಾನ

ಬೆಳಗಾವಿಯ ರಾಷ್ಟ್ರೀಯ ಬಸವ ದಳ ಒಂದು ಕ್ರಿಯಾಶೀಲ ಘಟಕ. ಏನನ್ನಾದರೂ ಹೊಸತನ್ನು ಮಾಡುತ್ತಲೇ ಇರುತ್ತಾರೆ. ಅದಕ್ಕೆ ಕಾರಣ ಉತ್ಸಾಹಿ ಶರಣರಾದ ಕೆ. ಬಸವರಾಜ. ಸೌಜನ್ಯದ ನಡೆ ನುಡಿಯಿಂದ, ಜೇನು ಸವರಿದ ಭಾಷೆಯಿಂದ ಎಲ್ಲರನ್ನೂ ಹಿಡಿದಿಟ್ಟು ಕೆಲಸ ಮಾಡುವ ಕಲೆ ಅವರದು. ಅವರು ಅಧ್ಯಕ್ಷರಾಗಿರುವ ಬೆಳಗಾವಿ ರಾಷ್ಟ್ರೀಯ ಬಸವ ದಳದವರು ಒಂದು ಹೊಸ ಪ್ರಯೋಗ ಮಾಡಿ ಕಲ್ಯಾಣ ಪರ್ವಕ್ಕೆ ಬಂದ ಜನರನ್ನು ಮಂತ್ರ ಮುಗ್ಧಗೊಳಿಸಿ, ಮುಂದಿನ ಶರಣ ಮೇಳದಲ್ಲಿ ಈ ರೂಪಕ ನೋಡಲು ಜನರು ಈಗಿನಿಂದಲೇ ಕಾತರಿಸುವಂತೆ ಮಾಡಿದ್ದಾರೆ. ಅದೇ "ಬಸವ ಧರ್ಮದ ಉದಯ ಮತ್ತು ಪುನರುತ್ಥಾನ" ಎಂಬುವ ರೂಪಕ. ಕಥೆಯೊಡನೆ ಧ್ವನಿ ಮತ್ತು ಬೆಳಕಿನ ಸಂಯೋಜನೆಯನ್ನು ಮಾಡಿರುವುದು ನಿರೂಪಣೆಗೆ ಜೀವ ತುಂಬಿದೆ.

ಗುರು ಬಸವಣ್ಣನವರ ಜನನದೊಡನೆ ಕಥೆಯು ಪ್ರಾರಂಭವಾಗುತ್ತದೆ. ಬಾಲಕ ಹುಟ್ಟುತ್ತಲೇ ದಲಿತ ವಿಮೋಚಕನಾಗುವುದು ಹೃದಯಸ್ಪರ್ಶಿ ಘಟನೆಯಾಗಿದೆ. ಮನೆಯನ್ನು ಬಿಡುವುದು, ಕೂಡಲ ಸಂಗಮದಲ್ಲಿ ವಿದ್ಯಾಭ್ಯಾಸ, ಸಾಕ್ಷಾತ್ಕಾರ, ಇಷ್ಟಲಿಂಗ ಜನಕರಾಗುವುದು ಎಲ್ಲ ಜೀವಂತವಾಗಿ ಬಂದಿವೆ. ಅನುಭವ ಮಂಟಪ ನಿರ್ಮಾಣ, ಶರಣರ ಆಗಮನ ಅಷ್ಟೇ ಸ್ಫೂರ್ತಿದಾಯಕವಾಗಿವೆ. ಹರಳಯ್ಯ-ಕಲ್ಯಾಣಮ್ಮನವರ ಪ್ರಸಂಗ, ಶರಣು ಶರಣಾರ್ಥಿ, ಮಧುವರಸರ ಪರಿವರ್ತನೆ ಮನೋಜ್ಞವಾಗಿ ಮೂಡಿವೆ. ವರ್ಣಾಂತರ ವಿವಾಹ, ಕಲ್ಯಾಣ ಕ್ರಾಂತಿ, ಗುರು ಬಸವಣ್ಣನವರ ಗಡಿಪಾರು, ಚೆನ್ನಾಗಿ ಮೂಡಿವೆ. "ಆನೆಯು ರಂಗಭೂಮಿಯ ಮೇಲೆ ಬಂದು" ಶರಣರಿಗೆ ಎಳಹೂಟೆಯಾಗುವುದಂತೂ ಅನೂಹ್ಯ. ಶರಣರು ವಚನ ಸಾಹಿತ್ಯದೊಡನೆ ನಿರ್ಗಮಿಸುವುದು, ಕಾದರವಳ್ಳಿ ಕಾಳಗ- ಶರಣರಿಗೆ ಸೋಲು, ನಂತರ ಮುರುಗೋಡದಲ್ಲಿ ಯುದ್ಧ - ಶರಣರಿಗೆ ಜಯ ಮನೋಜ್ಞವಾಗಿವೆ. ಉಳವಿಯಲ್ಲಿ ಮಹಾಮನೆ, ಪುನಃ ದಾಸೋಹ ಚೆನ್ನಾಗಿ ಮೂಡಿದೆ. ಪುನರುತ್ಥಾನವು ಆರಂಭವಾಗಿ ಶರಣ. ಫ.ಗು.ಹಳಕಟ್ಟಿ ಬರುತ್ತಾರೆ. ಶರಣ ಹರ್ಡೇಕರ್ ಮಂಜಪ್ಪನವರು ಬರುತ್ತಾರೆ ; ಸ್ವಾತಂತ್ರ್ಯ ಸಂಗ್ರಾಮ ಕಾಣಸಿಗುತ್ತದೆ. ಮಹಾತ್ಮ ಗಾಂಧೀಜಿ ಪಾತ್ರವಂತೂ ಅದ್ಭುತ ಎನಿಸುತ್ತದೆ. ನಂತರ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಆಗಮನ ಮತ್ತು ಪ್ರವಚನ. ಮಾತೆ ಮಹಾದೇವಿಯವರು ಆಗಮಿಸುತ್ತಾರೆ. ಷಟಸ್ಥಲ ಧ್ವಜ ಹಾರಾಡುತ್ತದೆ. ಹೀಗೆ ಸುಮಾರು 50 ನಿಮಿಷಕಾಲ ರೂಪಕ ಸಾಗುತ್ತದೆ.

ಸೃಜನಾತ್ಮಕ (creative) ಆದ ಈ ಪ್ರಯತ್ನ ಅಮೋಘ. ಮಕ್ಕಳು-ಮುದುಕರು, ಯುವಕರು-ಯುವತಿಯರು ಎಲ್ಲ ಪಾತ್ರಗಳು ರಾಷ್ಟ್ರೀಯ ಬಸವ ದಳದ ಶರಣ ಶರಣೆಯರದು. ಕಸದಿಂದ ರಸ ತೆಗೆಯುವಂತೆ ನಿರ್ದೇಶಕರಾದ ಬಾಬಾಸಾಹೇಬ್ ಕಾಂಬ್ಳೆ, ರಾಜೂ ಮಠಪತಿ (ರಂಗ ಸಜ್ಜಿಕೆ ಮತ್ತು ಬೆಳಕು) ಶರಣೆ ಜಯಶ್ರೀ ಲಿಂಗಾಯತ್ ಅವರ ಪರಿಕಲ್ಪನೆ-ಹೀಗೆ ಸಾಕಾರಗೊಂಡಿದೆ. ಆರ್ಥಿಕವಾಗಿಯೂ ಹೆಚ್ಚು ಹಣವನ್ನು ವ್ಯಯಿಸಲಾಗಿದೆ. ಆದರೆ ಇದೊಂದು ಅದ್ಭುತ ಪ್ರಯತ್ನ. ಕೂಡಲಸಂಗಮದಲ್ಲಿ ನಡೆಯುವ 26ನೆಯ ಶರಣ ಮೇಳದಲ್ಲಿ ನಾವು ನೀವೆಲ್ಲರೂ ಮತ್ತೊಮ್ಮೆ ನೋಡೋಣ.

ವಚನ ಪ್ರಭೆ :

ನಿಮ್ಮ ಮೂರ್ತಿಗೊಳಿಸುವೆನಯ್ಯಾ ಬಸವಣ್ಣ

- ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ

ನೆನೆವೆನಯ್ಯಾ ಬಸವಣ್ಣ
ನಿಮ್ಮ ಚರಣವೆನ್ನ ಮನದಲ್ಲಿ ಸಾಹಿತ್ಯವಹನ್ನಕ್ಕ
ನೋಡುವೆನಯ್ಯ ಬಸವಣ್ಣ
ನಿಮ್ಮ ಮೂರ್ತಿ ಎನ್ನನಂಗವಿಸುವನ್ನಕ್ಕ
ಪೂಜಿಸುವೆನಯ್ಯಾ ಬಸವಣ್ಣ
ನಿಮ್ಮ ಪ್ರಸಾದವೆನ್ನ ತನುವಹನ್ನಕ್ಕ
ನಿಮ್ಮ ಆಹ್ವಾನಿಸುವೆನಯ್ಯಾ ಬಸವಣ್ಣ
ಅನಿಮಿಷ ನಿಮಿಷ ನಿಮಿಷಗಳಿಲ್ಲವೆಂದೆನಿಸುವನ್ನಕ್ಕ
ನಿಮ್ಮ ಧ್ಯಾನಿಸುವೆನಯ್ಯ ಬಸವಣ್ಣ
ಜ್ಞಾನಾಜ್ಞಾನವಿಲ್ಲವೆನಿಸುವನ್ನಕ್ಕ
ನಿಮ್ಮ ಮೂರ್ತಿಗೊಳಿಸುವೆನಯ್ಯ ಬಸವಣ್ಣ
ಅಹಂ ಸೋಹಂ ಎಂಬ ಶಬ್ದವುಳ್ಳನ್ನಕ್ಕ
ಬಸವಣ್ಣಾ ಎಂದು ಹಾಡುವೆನಯ್ಯಾ
ಎನ್ನ ತನುವಿನ ಗಮನ ನಿರ್ಗಮನವಹನ್ನಕ್ಕ
ಬಸವಣ್ಣಾ ಬಸವಣ್ಣಾ ಬಸವಣ್ಣಾ ಎನುತಿರ್ದೆನಯ್ಯ
ಕಲಿದೇವರ ದೇವನೆಂಬ ಶಬ್ದವುಳ್ಳನ್ನಕ್ಕ.

(ಸ.ವ.ಸಂ.3ರಲ್ಲಿ ಮಡಿವಾಳ ಮಾಚಿದೇವರು-660)

ವಿಶ್ವಗುರು ಮಂತ್ರಪುರುಷ ಬಸವಣ್ಣನವರು ತಮ್ಮ ಸಮಕಾಲೀನ ಶರಣರ ತನು-ಮನ-ಭಾವಗಳನ್ನು ಆವರಿಸಿಕೊಂಡಿರುವ ವಚನಗಳನ್ನು ಅಧ್ಯಯನ ಮಾಡಿದಾಗ ಇಂದ್ರಿಯಗಳೊಂದಿಗೆ ನಮ್ಮ ಮನ ಮತಿಗಳು ಮಂತ್ರಮುಗ್ಧವಾಗಿ ಬಸವಾನುಭೂತಿಯ ಸಾಗರದಲ್ಲಿ ಕ್ಷಣವಾದರೂ ಮುಳುಗೇಳುತ್ತವೆ. ಅಂದಾಗ ತಮ್ಮ ಕಣ್ಣ ಮುಂದೆ ಸುಳಿದಾಡುತ್ತಿದ್ದ ಗುರು ಬಸವಣ್ಣನವರ ಪರುಷ ವ್ಯಕ್ತಿತ್ವ, ಸಾನ್ನಿಧ್ಯ, ಒಡನಾಟದಿಂದ ಅಂದಿನ ಶರಣ ವೃಂದ ಕಾಯಾ-ವಾಚಾ-ಮನಸಾ ಆಕರ್ಷಿತರಾಗಿ ಪ್ರಭಾವಿತರಾದುದು ಅಚ್ಚರಿಯೇನಲ್ಲ.

ಅಂತೆಯೇ ವೀರಗಣಾಚಾರಿಗಳೆಂದು ಹೆಸರಾಗಿದ್ದ ಗುರು ಬಸವಣ್ಣನವರ ಪರಮಾಪ್ತರೂ, ವಚನ ಸಾಹಿತ್ಯ ಸಂರಕ್ಷಕರೂ, ನಿತ್ಯ ಸ್ಮರಣಾರ್ಹರೂ ಆದ ಮಡಿವಾಳ ಮಾಚಿತಂದೆಯವರು ತಮ್ಮ ವಚನಗಳಲ್ಲಿ ಪ್ರಾಣ ಸ್ವರೂಪರಾದ ಗುರು ಬಸವಣ್ಣನವರ ಪರಿಪೂರ್ಣ ವ್ಯಕ್ತಿತ್ವದ ಆಕರ್ಷಣೆಗೆ ಒಳಗಾದ ಪರಿ ನಿಜಕ್ಕೂ ಬೆರಗು ಮೂಡಿಸುತ್ತದೆ. ಈಗ ಮಾಚಿತಂದೆಯವರ ಮಾತುಗಳಿಂದ ನಾವು ಬಸವ ಸಾನ್ನಿಧ್ಯದ ಸಾರ್ಥಕತೆಯನ್ನು ಅನುಭವಿಸೋಣ.

ಗುರು ಬಸವಣ್ಣನವರ ಚರಣಕಮಲಗಳನ್ನು ಸದಾಕಾಲವೂ ನೆನೆಯುತ್ತೇನೆ. ಬಸವ ಪಾದ ಮುದ್ರೆಯು ನನ್ನ ಹೃದಯದಲ್ಲಿ ಅಚ್ಚೊತ್ತುವವರೆಗೂ ಎಡಬಿಡದೆ ಸ್ಮರಿಸುತ್ತೇನೆ. ತನ್ಮೂಲಕ ಮನಸ್ಸನ್ನು ಗುರುವಿಗೆ ಅರ್ಪಿಸಿ ಗುರು-ಶಿಷ್ಯ ಸಂಬಂಧವನ್ನು ಬೆಸೆಯುತ್ತೇನೆ ; ಗಟ್ಟಿಗೊಳಿಸುತ್ತೇನೆ.

ಗುರು ಬಸವಣ್ಣನವರನ್ನು ಕ್ಷಣಕಾಲವೂ ಅಗಲದಂತೆ ನನ್ನ ಕಣ್ಣುಗಳಲ್ಲಿ ತುಂಬುಕೊಳ್ಳುತ್ತೇನೆ. ನಿತ್ಯವೂ ದರ್ಶಿಸುತ್ತೇನೆ. ಕೇವಲ ಕಣ್ಣುಗಳಿಂದ ಮಾತ್ರವಲ್ಲ ; ಗುರು ಬಸವಣ್ಣನವರ ಸಾಕಾರ ಸಾತ್ವಿಕ ತೇಜೋ ರೂಪವನ್ನು ನನ್ನ ಸರ್ವಾಂಗದಲ್ಲೂ ತುಂಬಿಕೊಂಡು ಧನ್ಯನಾಗುತ್ತೇನೆ.

ಕೇವಲ ತಮ್ಮ ಪಾದ ಸ್ಪರ್ಶನ, ದರ್ಶನ ಲಾಭ ಮಾತ್ರದಿಂದಲ್ಲದೆ ತಮ್ಮನ್ನು ಭಕ್ತಿ, ಶ್ರದ್ಧೆ ಶರಣಾಗತಿಗಳಿಂದ ನಿತ್ಯವೂ ಪೂಜಿಸಿ ಪ್ರತಿಫಲವಾಗಿ ಪ್ರಸಾದವನ್ನು ಬೇಡುತ್ತೇನೆ. ಈ ಕರುಣ ಪ್ರಸಾದವನ್ನು ಸ್ವೀಕರಿಸಿದ



ಪೂಜ್ಯ ಶ್ರೀ ನಿಡುಸೋಸಿ ಜಗದ್ಗುರುಗಳ ಸನ್ನಿಧಿಯಲ್ಲಿ
ಸನ್ಮಾನ್ಯ ಯಡಿಯೂರಪ್ಪನವರಿಗೆ ಸನ್ಮಾನ



ಕಲ್ಯಾಣ ಪರ್ವ ಉತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ
ಶರಣ ಭುಜೇಂದ್ರ ಬಳ್ಳೇಕೆರೆ ಇವರಿಗೆ ಯಡಿಯೂರಪ್ಪನವರಿಂದ ಸನ್ಮಾನ



ಹೆಲಿಕಾಪ್ಟರ್ ವ್ಯವಸ್ಥೆ ಮಾಡಿದ ಶರಣ ಸೂರ್ಯಕಾಂತ
ನಾಗಮಾರಪಳ್ಳಿಯವರಿಗೆ ಯಡಿಯೂರಪ್ಪನವರಿಂದ ಸನ್ಮಾನ



ವಸತಿ ಸಚಿವ, ಕಲ್ಯಾಣ ಪರ್ವ ಉತ್ಸವ ಸಮಿತಿಯ
ಅಧ್ಯಕ್ಷ ಶರಣ. ವಿ. ಸೋಮಣ್ಣನವರಿಗೆ ಸತ್ಕಾರ



ಕೃಷಿ ಮಾರುಕಟ್ಟೆ ಆಯುಕ್ತರಾದ ಡಾ||ಸಿ. ಸೋಮಶೇಖರ್
ಮತ್ತು ಸರ್ವಮಂಗಳಾ ಅವರಿಗೆ ಸನ್ಮಾನ



ಭಾವುಕ ಭಕ್ತರಿಂದ ಬೃಹತ್ ಮಾಲಾರ್ಪಣೆ ಪೂಜ್ಯ ಮಾತಾಜಿಯವರಿಗೆ. ಚಿತ್ರದಲ್ಲಿ
ಸೂರ್ಯಕಾಂತ ನಾಗಮಾರಪಳ್ಳಿ, ಯಡಿಯೂರಪ್ಪ, ನಿಡುಸೋಶಿ ಜಗದ್ಗುರುಗಳು



ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಂದ ಪೀಠಾರೋಹಣ ದಿ. 29-10-2012
ಮತ್ತು ಬಸವ ಧರ್ಮ ಪೀಠದ ಎಲ್ಲ ಜಂಗಮ ಮೂರ್ತಿಗಳನ್ನು ಕಾಣಬಹುದು



ಪೀಠಾರೋಹಣ ಮಾಡಿದ ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ
ಸ್ವಾಮೀಜಿಯವರಿಗೆ "ಬಸವ ವಚನಾಮೃತ" ಗ್ರಂಥಾರ್ಪಣೆ



ಅಮೋಘ ಸೇವೆಗಾಗಿ "ಶರಣ ರತ್ನ" ವಿಶೇಷ ಫಲಕ ಅರ್ಪಣೆ



108 ಅಡಿ ಪುತ್ಥಳಿಯ ಶಿಲ್ಪಿ ಕೆ. ಶ್ರೀಧರ ಮೂರ್ತಿಯವರಿಗೆ ಸನ್ಮಾನ



ಭವ್ಯಮೂರ್ತಿಯ ನಿರ್ಮಾಣದಲ್ಲಿ ಮಾರ್ಗದರ್ಶನ ಮಾಡಿದ
ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷ ಎನ್. ಪುಟ್ಟರುದ್ರರವರಿಗೆ ಸನ್ಮಾನ



ಪುಷ್ಪವೃಷ್ಟಿ ಮಾಡಲು ಹೆಲಿಕಾಪ್ಟರ್‌ನಲ್ಲಿ ಕುಳಿತಿರುವ ಪೂಜ್ಯ ಮಾತಾಜಿ,
ಸೂರ್ಯಕಾಂತ ನಾಗಮಾರಪಳ್ಳಿ, ಶಕುಂತಲಾ ಬೆಲ್ದಾಳೆ.

ಪರಿಣಾಮವಾಗಿ ಶರೀರವು ಪ್ರಸಾದ ತನುವಾಗಿ ಶೋಭಿಸಲು ಮತ್ತು ಜೀವನವು ದೈವೀಮಯವಾಗಿ ಪ್ರಕಾಶಿಸಲು ನಿತ್ಯವೂ ಪೂಜಿಸಿ ಪ್ರಸಾದವನ್ನು ಸ್ವೀಕರಿಸುತ್ತೇನೆ.

ಗುರು ಬಸವಣ್ಣನವರ ಶ್ರೀ ಪಾದ ಸ್ಪರ್ಶನ, ದರ್ಶನ, ಪೂಜೆ ಪ್ರಸಾದಗಳಿಂದ ಸಾರ್ಥಕತೆಯನ್ನು ಅನುಭವಿಸಿದ ಮಾಚಿದೇವರು ಇದೀಗ ಗುರು ಬಸವಣ್ಣನವರನ್ನು ಪ್ರತ್ಯಕ್ಷವಾಗಿ ಪರೋಕ್ಷವಾಗಿ ತಮ್ಮ ಮನೆಗೆ-ಮನೋ ಮಂದಿರಕ್ಕೆ ಸ್ವಾಗತಿಸಲು-ಆಹ್ವಾನಿಸಲು ಸಜ್ಜಾಗಿ ನಿಂತಿದ್ದಾರೆ. ಅವರ ಸ್ವಾಗತದ ಪರಿ ಎಂದರೆ ಗುರು ಬಸವಣ್ಣನವರು ಬರುವ ದಾರಿಯನ್ನು ಎವೆಯಿಕ್ಕದೆ ದೃಷ್ಟಿಸುತ್ತಾ ಕಾಲದ, ದಿನಗಳ, ಗಂಟೆಗಳ, ನಿಮಿಷಗಳ ಪರಿವೆಯಿಲ್ಲದೆ ನಿರೀಕ್ಷಿಸುತ್ತಾ ಗುರು ಬಸವಣ್ಣನವರು ಬರುವವರೆಗೂ ಸದಾಕಾಲ ಜಾಗೃತರಾಗಿದ್ದು ಕಾಯುತ್ತ ದಣಿವರಿಯದೆ ನಿಲ್ಲುತ್ತೇನೆ. ಬಂದ ಕ್ಷಣವನ್ನು ಹೃದಯತುಂಬಿ ಸ್ವಾಗತಿಸುತ್ತೇನೆ. ಸಂದು ಸಂಶಯವಿಲ್ಲದಂತೆ ಉಪಚರಿಸುತ್ತೇನೆ.

ಬಸವಣ್ಣ, ನಿಮ್ಮನ್ನು ನಿತ್ಯವೂ ಧ್ಯಾನಿಸುತ್ತೇನೆ. ಜ್ಞಾನ-ಅಜ್ಞಾನ; ಕತ್ತಲೆ-ಬೆಳಕು; ಸತ್ಯ-ಮಿಥ್ಯಗಳಿಗೆ ಅತೀತವಾಗಿ ಪ್ರಕಾಶಿಸುತ್ತಿರುವ ನಿಮ್ಮನ್ನು ಧ್ಯಾನಿಸಿ ನಾನು ಲೌಕಿಕ ಮತ್ತು ಪಾರಲೌಕಿಕದ ಎಲ್ಲಾ ರೀತಿಯ ದ್ವಂದ್ವಗಳಿಂದ ಮುಕ್ತನಾಗಲು ಧ್ಯಾನಿಸುತ್ತೇನೆ.

ಬಸವಣ್ಣಾ, ನಿಮ್ಮ ಜೀವನ, ಸಾಧನೆ ಸಂದೇಶಗಳನ್ನು ಮುಂಬರುವ ಜಗತ್ತು ಅರಿಯಲಿ ಸ್ಮರಿಸಲಿ ಎಂಬ ಘನ ಉದ್ದೇಶದಿಂದ ನಿಮ್ಮ ವಿರಾಟರೂಪದ ಮಂಗಳ ಮೂರ್ತಿಯನ್ನು ಈ ಇಳೆಯಲ್ಲಿ ಪ್ರತಿಷ್ಠಾಪಿಸುತ್ತೇನೆ. ನಾನು ಎಂದರೆ ರಕ್ತ, ಮೂಳೆ ಮಾಂಸಗಳಿಂದ ಆಗಿರುವ ಶರೀರ, ಮನ ಬುದ್ಧಿಗಳಲ್ಲ. ಪರಮಾತ್ಮನ ಅಂಶವಾದ ಆತ್ಮ ಸ್ವರೂಪವೇ ನಾನು ಎಂಬ ಆತ್ಮಜ್ಞಾನ ಈ ಜಗತ್ತಿನಲ್ಲಿ ನೆನೆಯೂರಲಿ ಎಂಬ ಆಶಾಭಾವದಿಂದ ನಾನು ನಿಮ್ಮ ಶ್ರೀ ಮೂರ್ತಿಯನ್ನು ಸ್ಥಾಪಿಸುತ್ತೇನೆ ಮಾತ್ರವಲ್ಲ ಮೊಟ್ಟ ಮೊದಲಿಗೆ ದೇವರ ಬಗ್ಗೆ ಸ್ಪಷ್ಟವಾದ ಪರಿಕಲ್ಪನೆಯನ್ನು ಧೈರ್ಯದಿಂದ ಪ್ರತಿಪಾದಿಸಿದ ನಿಮ್ಮ ಮೂರ್ತಿಯನ್ನು "ನಾನೇ ಪರಮಾತ್ಮ ; ದೇವರು ಎಂದು ಜಗತ್ತಿನ ಮುಗ್ಧ ಜನರನ್ನು ಶೋಷಿಸುತ್ತಾ ಬದುಕುತ್ತಿರುವವರ ಮುಂದೆ ಸ್ಥಾಪಿಸುತ್ತೇವೆ. ಸೋಹಂ ತತ್ತ್ವವನ್ನು ಅಲ್ಲಗಳೆದು ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣಕರ್ತನಾದ ನಿರಾಕಾರ ನಿರಂಜನ ಸರ್ವಶಕ್ತನಾದ ಪರಮಾತ್ಮನೊಬ್ಬನಿದ್ದಾನೆ ಎಂದು ಸಾರಿದ ನಿಮ್ಮನ್ನು ಆರಾಧಿಸುತ್ತೇನೆ.

ತಮ್ಮ ಮುಂದೆ ಭಕ್ತಿ ಶ್ರದ್ಧೆ ಆನಂದದಿಂದ ಹಾಡುತ್ತಾ ; ಕೊಂಡಾಡುತ್ತಾ ಮೈಮರೆಯುತ್ತೇನೆ. ಬಸವೋನ್ಮಾದದಿಂದ ದೇಹ ಪ್ರಜ್ಞೆ ಸಂಪೂರ್ಣವಾಗಿ ಅಳಿದು ಮನಸ್ಸು ಬುದ್ಧಿ ಭಾವಗಳು ನಿಮ್ಮ ನಾಮ ಸ್ಮರಣೆಯಲ್ಲಿ ತನ್ಮಯವಾಗಿ ಬಸವಾನುಭೂತಿಯಲ್ಲಿ ಮುಳುಗಿ ತೇಲಾಡುವಷ್ಟು ಹಾಡುತ್ತೇನೆ. ಕುಣಿದು ಕುಪ್ಪಳಿಸಿ ನಲಿಯುತ್ತೇನೆ. ನನ್ನ ಜೀವನದ ಕೊನೆಯುಸಿರುವವರೆಗೂ ಅನ್ಯ ದೇವತೆಗಳ ಸಾಧು ಸಂತರ ಸ್ಮರಣೆ ಭಜನೆ ಮಾಡದೆ ಬಸವಣ್ಣಾ ಬಸವಣ್ಣಾ ಎಂದು ಬದುಕುತ್ತೇನೆ. ಹೀಗೆ ಮಡಿವಾಳ ಮಾಚಿದೇವರ ವಚನದಲ್ಲಿ ಕಂಡುಬಂದ ಗುರು ಬಸವಣ್ಣನವರ ದರ್ಶನ ವೈಭವಕ್ಕೆ ಸಾಕ್ಷಿಯಾಗಿ ಬಸವಯೋಗಿ ಶ್ರೀ ಸಿದ್ಧರಾಮೇಶ್ವರರು ಸಹ ಧ್ವನಿಗೂಡಿಸಿರುವುದು ಮಾತ್ರವಲ್ಲ ಬಸವ ದರ್ಶನದಿಂದ ತಾವು ಪಡೆದ ಸಾರ್ಥಕತೆಯ ಪರಿಯನ್ನು ಹೀಗೆ ವ್ಯಕ್ತಪಡಿಸುತ್ತಾರೆ.

ಪಾವನನಾದೆನು ಬಸವಣ್ಣ ನಿಮ್ಮ ಪಾವನ ಮೂರ್ತಿಯ ಕಂಡು
ಪರತತ್ತ್ವವನೈದಿದೆ ಬಸವಣ್ಣ ನಿಮ್ಮ ಪರಮ ಸೀಮೆಯ ಕಂಡು
ಪದನಾಲ್ಕು ಮೀರಿದೆ ಬಸವಣ್ಣ ನಿಮ್ಮ ಪರುಷ ಪಾದವ ಕಂಡು
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕೂಡಿದೆ
ಬಸವಣ್ಣಾ, ಬಸವಣ್ಣಾ, ಬಸವಣ್ಣಾ
ನೀನು ಗುರುವಾದೆಯಾಗಿ.

– ಬಸವಯೋಗಿ ಶ್ರೀ ಸಿದ್ಧರಾಮೇಶ್ವರರು –917

ಗುರು ಬಸವ ತಂದೆಯೇ, ಅಂತರಂಗ-ಬಹಿರಂಗ ಎರಡರಲ್ಲೂ ಅತ್ಯಂತ ಪರಿಶುದ್ಧರೂ, ಪವಿತ್ರಾತ್ಮರೂ ಆದ ನಿಮ್ಮ ವ್ಯಕ್ತಿತ್ವದ ದರ್ಶನದಿಂದ ನಾನು ಪವಿತ್ರನಾದೆ. ಪಾವನನಾದೆ. ಸೀಮಾತೀತನೆನಿಸಿರುವ ಪರಮಾತ್ಮ ತತ್ತ್ವವನ್ನು ನಿಮ್ಮಿಂದ ಅರಿತೆ. ನಿಮ್ಮ ತತ್ತ್ವಗಳಿಂದ ಪ್ರಭಾವಿತನಾಗಿ ಆಚರಿಸಿ ಶ್ರೇಷ್ಠನಾದೆ. ತಮ್ಮ ಪರುಷಮಯ

ಪಾದದರ್ಶನದಿಂದ ಪ್ರತಿಯೊಬ್ಬ ಮುಮುಕ್ಷು ಪಡೆಯಲು ಹಂಬಲಿಸುವ ಚತುಷ್ಟಯ ಪದವಿಗಳೆನಿಸಿದ ಸಾಮೀಪ್ಯ, ಸಾಲೋಕ್ಯ, ಸಾರೂಪ್ಯ ಮತ್ತು ಸಾಯುಜ್ಯ ಪದವಿಗಳ ಮೋಹ, ಭ್ರಮೆಯಿಂದ ಹೊರಬಂದು ಸತ್ಯ ಶುದ್ಧ ಶರಣರು ತೋರಿದ ದಾರಿಯಲ್ಲಿ ಸಾಗಿ ಗುರಿ ಮುಟ್ಟುವುದೇ ಮಹಾಪದವಿ ಎಂಬುದನ್ನು ಅರಿತೆ.

ತಾವು ಗುರುವಾಗಿ ಬಂದು ಕಾರುಣ್ಯ ತೋರಿದ್ದರಿಂದ ನನ್ನ ಜೀವನದಲ್ಲಿ ಇಂಥ ಅದ್ಭುತ ಪರಿವರ್ತನೆ ಸಾಧ್ಯವಾಯಿತು. ಪರಮಾತ್ಮನೊಡನೆ ಸಮರಸ ಹೊಂದಿ ಆನಂದಿಸಲು ತಾವು ಕಾರಣರಾದಿರಿ. ಇದರ ಪರಿಣಾಮವಾಗಿ ನಾನು ತಮ್ಮನ್ನು ಸದಾ ಸ್ಮರಿಸುತ್ತೇನೆ.

12ನೇ ಶತಮಾನದ ಇಂಥ ಅಸಂಖ್ಯಾತ ಶರಣರ ವಚನಗಳಿಗೆ ಸಾಕ್ಷಿಯಾಗಿ ಬಸವ ಕಲ್ಯಾಣದಲ್ಲಿ ನಡೆಯುತ್ತಿರುವ 11ನೇ ಕಲ್ಯಾಣಪರ್ವದಲ್ಲಿ ವಿಶೇಷವಾಗಿ ಉದ್ಘಾಟನೆಗೊಳ್ಳುತ್ತಿರುವ 108 ಅಡಿ ಎತ್ತರದ ಗುರು ಬಸವಣ್ಣನವರ ವಿರಾಟ ಮೂರ್ತಿ ಇನ್ನು ಮುಂದೆ ಜಗತ್ತನ್ನು ಆಕರ್ಷಿಸಿ ತನ್ನೆಡೆಗೆ ಸೆಳೆದುಕೊಳ್ಳುವುದರಲ್ಲಿ ಅತಿಶಯೋಕ್ತಿಯಿಲ್ಲ.

ನಮಗೆಲ್ಲ ಗುರು ಬಸವ ದರ್ಶನ ಮಾಡಿಸಿ ಮತ್ತೆ ಬಸವ ವೈಭವ ಮೆರೆಯುವಂತೆ ಸಾಧನೆಗೈದಿರುವ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ಸಂಕಲ್ಪದ ಸಾಕಾರಕ್ಕೆ ಕೈ ಜೋಡಿಸಿ ಶ್ರಮಿಸುತ್ತಿರುವ ತ್ಯಾಗಿಗಳಿಗೂ ಶರಣರಿಗೂ ನಮೋ ನಮಃ. *****

ಚನ್ನಬಸವೇಶ್ವರ ಜ್ಯೋತಿ ಯಾತ್ರೆ

ಅಂದು ಕಲ್ಯಾಣ ಕ್ರಾಂತಿಯಾದಾಗ ಶರಣರು ವಚನ ಸಾಹಿತ್ಯವನ್ನು ಸಂರಕ್ಷಿಸಲು ಸಹ್ಯಾದ್ರಿಯ ಅರಣ್ಯಕ್ಕೆ ನಡೆದರು. ದುರ್ಗಮ ಅರಣ್ಯದ ಮಧ್ಯೆ ಒಂದು ಬಯಲು ಪ್ರದೇಶವನ್ನು ಕಂಡು "ನಾನು ಇಲ್ಲಿ ಉಳಿವೆ" ಎಂದು ಚಿನ್ಮಯಜ್ಞಾನಿ ಚನ್ನಬಸವಣ್ಣನವರು ಬಿಡಾರ ಮಾಡಿದ್ದೇ 'ಉಳಿವೆ' ಎಂಬ ಸುಕ್ಷೇತ್ರವಾಯಿತು. ಅಲ್ಲಿಯೇ ಅವರು ಲಿಂಗೈಕ್ಯರಾದರು. ಇಂಥ ಉಳಿವೆಯಿಂದ ಚನ್ನಬಸವೇಶ್ವರ ಜ್ಯೋತಿಯನ್ನು ತರುವ ಸಂಕಲ್ಪವನ್ನು ಧಾರವಾಡ ರಾಷ್ಟ್ರೀಯ ಬಸವ ದಳದವರು ಕೈಗೊಂಡು ದಿ. 7-10-2012ರಂದು ಹೊರಟರು. ಮಾರ್ಗ ಮಧ್ಯೆ ಊರೂರುಗಳಲ್ಲಿ ಪಾದಯಾತ್ರೆ ಮಾಡುತ್ತ ಪ್ರವಚನಗಳನ್ನು ಮಾಡುತ್ತ ಧರ್ಮ ಜಾಗೃತಿಯ ಕಾರ್ಯವನ್ನು ಕೈಗೊಂಡರು. ಶರಣ ಶಿವಕುಮಾರ ಕಟಗಿ, ಶರಣೆ. ನೀಲಾಂಬಿಕಾ ಇಂಗಳಳ್ಳಿ ಇವರ ನೇತೃತ್ವದಲ್ಲಿ ಶರಣ, ಶರಣೆಯರ ತಂಡ ಸಂಚರಿಸಿತು. ಶರಣೆಯರು ಅದ್ಭುತವಾಗಿ ಪ್ರವಚನಗಳನ್ನು ಮಾಡುತ್ತಿದ್ದರು.

ಇಳಕಲ್ ಮಠದಲ್ಲಿ ಸ್ವಾಗತ

ಎಲ್ಲ ಊರುಗಳಲ್ಲೂ ಅದ್ಭುತವಾಗಿ ಸ್ವಾಗತ, ಪ್ರಸಾದ ವ್ಯವಸ್ಥೆ ಆತ್ಮೀಯವಾಗಿರುತ್ತಿತ್ತು. ಇಳಕಲ್ಲಿನ ಶ್ರೀ ವಿಜಯ ಮಹಾಂತೇಶ್ವರ ಮಠದಲ್ಲಿ ಆದರ ಪೂರ್ವಕ ಸ್ವಾಗತ ಚನ್ನಬಸವೇಶ್ವರ ಜ್ಯೋತಿಗೆ ಸಿಕ್ಕಿತು. ಪೂಜ್ಯ ಹಿರಿಯ ಶ್ರೀಗಳು ಮತ್ತು ಕಿರಿಯ ಶ್ರೀಗಳು ಉಭಯತರೂ ಜ್ಯೋತಿಯಾತ್ರೆಯ ಪರಿಕಲ್ಪನೆಯನ್ನು ಶ್ಲಾಘಿಸಿದರು. ಸ್ವತಃ ತಾವೇ ನಿಂತು ಪ್ರಸಾದವನ್ನು ನೀಡಿಸಿ ಹರ್ಷಿಸಿದರು. ಮಠದಲ್ಲಿ ಕಾರ್ಯಕ್ರಮ ನಡೆಸಿ, ಮುಕ್ತಕಂಠದಿಂದ ಶ್ಲಾಘಿಸಿದರು.

ಜ್ಯೋತಿಯಾತ್ರೆಯು 21 ದಿನಗಳವರೆಗೆ ಸಾಗಿ ದಿ.27-10-2012ರಂದು ಬಸವ ಕಲ್ಯಾಣವನ್ನು ಪ್ರವೇಶಿಸಿ, 11ನೆಯ ಕಲ್ಯಾಣ ಪರ್ವದ ಉದ್ಘಾಟನೆಯಲ್ಲಿ ವಿಲೀನವಾಯಿತು. ಧಾರವಾಡ ರಾಷ್ಟ್ರೀಯ ಬಸವ ದಳದವರ ಈ ಪರಿಶ್ರಮ ಅಭಿನಂದನೀಯ. ಜ್ಯೋತಿಯಾತ್ರೆಯಲ್ಲಿ ಭಾಗಿಯಾದ ಎಲ್ಲರಿಗೆ ಶುಭಹಾರೈಕೆಗಳು.

–ಮಾತಾಜಿ.

ಮರಳಿದ ಗತ ವೈಭವ : ಶರಣರ ಮರು ಪ್ರವೇಶ

ಕಲ್ಯಾಣ ಕರೆದಿದೆ ಕಲ್ಯಾಣ
ಗುರು ಬಸವಣ್ಣನ ಕಲ್ಯಾಣ
ಶರಣರಾಡಿದ ಕಲ್ಯಾಣ
ವಿಶ್ವಕೆ ಬಯಸುತ ಕಲ್ಯಾಣ

ಬಸವಾತ್ಮಜೆ ಪೂಜ್ಯ ಮಾತಾಜಿಯವರ ಸುಮಧುರ ಕಂಠ ಸಿರಿಯಿಂದ ತಾಳಬದ್ಧವಾಗಿ ಹೊರಸೂಸಿದ ಗೀತೆಯ ನಿನಾದದಲ್ಲಿ ಶುಭಾರಂಭಗೊಂಡ 11ನೆಯ ಐತಿಹಾಸಿಕ ಕಲ್ಯಾಣ ಪರ್ವವನ್ನು ನೋಡಿದವರು ಧನ್ಯರು, ಬಂದವರು-ಭಾಗ್ಯವಂತರು.

ಕನ್ನಡ ನಾಡಿನ ಶಿರೋಭಾಗದಲ್ಲಿ ಮುಕುಟಮಣಿಯಾಗಿ ಶೋಭಿಸುತ್ತಿರುವ ಕಲ್ಯಾಣ ಅಂದರೆ ಬಸವ ಕಲ್ಯಾಣ ಅಂದು ಇದೇ ನಾಡಿನಿಂದ ಚದುರಿಹೋಗಿದ್ದ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣ ಸಂದೋಹವನ್ನು ಮರಳಿ 850 ವರ್ಷಗಳ ತರುವಾಯ ಆತ್ಮೀಯವಾಗಿ ಸ್ವಾಗತಿಸಿ ತನ್ನ ಅಂದಿನ ಗತ ವೈಭವವನ್ನು ಮರಳಿ ಪಡೆಯಿತೇನೋ ಎಂಬಂತೆ ಭಾಸವಾಗುತ್ತಿತ್ತು. ಮೂರು ದಿನಗಳ ಕಲ್ಯಾಣ ಪರ್ವ ಅಕ್ಷರಶಃ 12ನೇ ಶತಮಾನದ ಶರಣ ಸಂಕುಲದ ದಿವ್ಯ ಚೈತನ್ಯಗಳನ್ನು ಕಲ್ಯಾಣದಲ್ಲಿ ಪುನಃ ಪ್ರವೇಶಗೊಳಿಸಿತು.

ನಾರಿಯೊಬ್ಬಳು ಬಂದು ಭಾರಿ ಅಬ್ಬರ ಹೊತ್ತು ಆರೂಢ ಭಿಕ್ಷವ ಬೇಡ್ಯಾಳು ಸುವ್ವಿ। ಮತ್ತಿನ್ನು ವೀರಬಸವಣ್ಣ ಬರುವಾಗ ಸುವ್ವಿ ಎಂಬ ಕಾಲಜ್ಞಾನ ವಾಣಿಯಂತೆ ಪರಮಪೂಜ್ಯ ಜಗದ್ಗುರು ಮಾತೆ ಮಹಾದೇವಿಯವರು ತಮ್ಮ ಅದ್ಭುತ ದೈವೀ ಶಕ್ತಿಯಿಂದ ಕಂಗೊಳಿಸಿ ಈ ದೇಶದಲ್ಲಿ ಮರಳಿ ಬಸವ ಯುಗವನ್ನು ನಿರ್ಮಾಣಗೈದ ಆ ದಿವ್ಯ ಸಮಗ್ರ ದೃಶ್ಯಕ್ಕೆ 3 ದಿನಗಳ ಕಲ್ಯಾಣ ಪರ್ವ ಸಾಕ್ಷಿಯಾಯಿತು.

ಇಡೀ ವಿಶ್ವದಲ್ಲಿಯೇ ಅತಿ ಎತ್ತರದ ಅಭಯ ಹಸ್ತದ ಪ್ರಸನ್ನ ವದನ ತಪೋ ಮೂರ್ತಿ ತೇಜೋ ಮೂರ್ತಿ ಧರ್ಮಗುರು ಬಸವಣ್ಣನವರ ಪುತ್ಥಳಿ ಅನಾವರಣಗೊಳ್ಳುತ್ತಿದ್ದಂತೆ ಲಕ್ಷ ಲಕ್ಷ ಶರಣರ ಕಣ್ಣಂಚಿನಲ್ಲಿ ಮೂಡಿದ ಆನಂದ ಬಾಷ್ಪ-ಭಾವೋದ್ವೇಗ ವರ್ಣಿಸಲು ನನ್ನ ಶಬ್ದಕೋಶದಲ್ಲಂತೂ ಪದಗಳೇ ಇಲ್ಲ. ಅಂದು ಕಲ್ಯಾಣ ನಾಡಿನಿಂದ ಚದುರಿದ ಶರಣರ ಎಲ್ಲ ಚೈತನ್ಯಗಳನ್ನು ಮರಳಿ ಕಲ್ಯಾಣ ನಾಡಿಗೆ ತಂದು ಮುಟ್ಟಿಸಿದ ವಿಶೇಷ ಕೀರ್ತಿಗೆ ಭಾಜನರಾದ ಏಕೈಕ ವ್ಯಕ್ತಿ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು.

ದಿ. 27ರಂದು ಶರಣವಾರ 10-30ಕ್ಕೆ ಪೂಜ್ಯ ಮಾತಾಜಿಯವರಿಂದ ಧರ್ಮ ಸಂಸ್ಥಾಪಕ ಗುರು ಬಸವಣ್ಣನವರ ಪೂಜೆಯೊಂದಿಗೆ ಶುಭಾರಂಭಗೊಂಡ 11ನೆಯ ಕಲ್ಯಾಣ ಪರ್ವದಲ್ಲಿ ಮಹಾರಾಷ್ಟ್ರದ ತಮಲೂರು ಮಠದ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮೀಜಿಯವರು ಸಾನ್ನಿಧ್ಯ ವಹಿಸಿ ಬಸವ ಧ್ವಜಾರೋಹಣಗೈದರು.

ಪ್ರಾಸ್ತಾವಿಕವಾಗಿ ಆಶೀರ್ವಚನ ನೀಡಿದ ಕಲ್ಯಾಣ ಪರ್ವದ ರೂವಾರಿ ಪೂಜ್ಯ ಮಾತಾಜಿಯವರು ಹನ್ನೆರಡನೆಯ ಶತಮಾನದಲ್ಲಿ ವೈಭವದಿಂದ ಮೆರೆದಿದ್ದ ಬಸವ ಕಲ್ಯಾಣ ದುಃಸ್ಥಿತಿಗೆ ತಲುಪಿತ್ತು. ಹಾಳು ಬಿದ್ದ ಶರಣರ ಗವಿಗಳನ್ನು ನೋಡಿದರೆ ಮನಸ್ಸಿಗೆ ನೋವು ಉಂಟಾಗುತ್ತಿತ್ತು. ಹೀಗಾಗಿ ಶರಣ ಸಂಸ್ಕೃತಿಯ ಪುನಃ ಸ್ಥಾಪನೆಯ ಸಂಕಲ್ಪದೊಂದಿಗೆ 2001ರಲ್ಲಿ 3 ಎಕರೆ ಜಾಗದಲ್ಲಿ ಬಸವ ಮಹಾಮನೆ ನಿರ್ಮಾಣ ಮಾಡಿ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಸದ್ಯ 1 ಹಂತದ ಕಾರ್ಯ ಪೂರ್ಣಗೊಂಡಿದ್ದು ವಿಶೇಷವಾಗಿ ಅಕ್ಕಮಹಾದೇವಿ ಗವಿಯಲ್ಲಿ 32 ಜನ ವಚನಕಾರ್ತಿಯರ ಮೂರ್ತಿಗಳ ಕೆತ್ತನೆ ಕಾರ್ಯ ಸೇರಿದಂತೆ ಇನ್ನೂ ಅನೇಕ ಕಾರ್ಯಗಳನ್ನು ಮಾಡಬೇಕಾಗಿದೆ ಎಂದರು.

ಸಮಾಜ ಸುಧಾರಕರೂ, ಧರ್ಮ ಸಂಸ್ಥಾಪಕರೂ ಆದ ಶ್ರೀ ಗುರು ಬಸವಣ್ಣನವರು ಬದುಕಿ ಬಾಳಿರುವುದು 36 ವರ್ಷಗಳಲ್ಲ. ಬದಲಾಗಿ 62 ವರ್ಷ 3 ತಿಂಗಳು. ಅರ್ಧಂಬರ್ಧ ತಿಳಿದುಕೊಂಡ ಕೆಲವು ಸಾಹಿತಿಗಳು ಸಮಾಜಕ್ಕೆ ತಪ್ಪು ಸಂದೇಶವನ್ನು ನೀಡುತ್ತಿದ್ದಾರೆ ಎಂದು ಆರೋಪಿಸಿದ ಮಾತಾಜಿಯವರು ಶ್ರೀ ಗುರು ಬಸವಣ್ಣನವರು 36 ವರ್ಷಗಳವರೆಗೆ ಕಲ್ಯಾಣದಲ್ಲಿ ನೆಲೆಸಿ ಈ ಕ್ಷೇತ್ರವನ್ನು ಪಾವನ ಮಾಡಿದರು. ವಿಕ್ರಮನಾಮ ಸಂವತ್ಸರ(ಕ್ರಿ.ಶ.1160)ದಲ್ಲಿ ಕಲ್ಯಾಣವನ್ನು ಪ್ರವೇಶಿಸಿ ರಾಕ್ಷಸನಾಮ ಸಂವತ್ಸರದ (ಕ್ರಿ.ಶ. 1196) ಫಾಲ್ಗುಣ ಮಾಸದ ದ್ವಾದಶಿಯವರೆಗೆ ಕರ್ಮಭೂಮಿಯನ್ನಾಗಿ ಮಾಡಿಕೊಂಡಿದ್ದರು. ವರ್ಣಾಂತರ ವಿವಾಹ ಮಾಡಿಸಿದರೆಂಬ ಆರೋಪದಿಂದಾಗಿ ಮಧ್ಯ ರಾತ್ರಿ ಕಲ್ಯಾಣದಿಂದ ಗಡಿಪಾರು ಶಿಕ್ಷೆಗೆ ಒಳಗಾಗಿದ್ದರು. ಆದ್ದರಿಂದ ಇಲ್ಲಿನ ಬಸವೇಶ್ವರ ದೇವಾಲಯದ ಜಾತ್ರಾ ಸಂದರ್ಭದಲ್ಲಿ ರಥವನ್ನು ರಾತ್ರಿ ೧೨ ಘಂಟೆಗೆ ಎಳೆಯುವ ಪರಂಪರೆ ಸಾಗಿ ಬಂದಿದೆ ಎಂದು ವಿವರಿಸಿದರು.

ಧರ್ಮ ಎಂದರೆ ಕೇವಲ ಸಂಸ್ಕಾರ ನೀಡುವುದು ಮತ್ತು ಸಂಘಟನೆ ಮಾಡುವುದಷ್ಟೇ ಅಲ್ಲ. ಸಮಾನತೆ ಸಹೋದರತ್ವದ ಭಾವನೆ ಮೂಡಿಸುವುದಾಗಿದೆ. ಅದಕ್ಕಾಗಿ ಬಸವಣ್ಣ 'ಗಣಪರ್ವ' ಮಾಡಿದ್ದಾರೆ. ಆ ಪರ್ವದ ಪುನಃ ಆಚರಣೆಯ ನಿಟ್ಟಿನಲ್ಲಿ ಕಳೆದ ೧೦ ವರ್ಷಗಳಿಂದ ಕಲ್ಯಾಣ ಪರ್ವ ಆಚರಿಸಲಾಗುತ್ತಿದೆ ಎಂದು ನುಡಿದ ಪೂಜ್ಯ ಮಾತಾಜಿ ಕೂಡಲ ಸಂಗಮ ಹಾಗೂ ಬಸವಕಲ್ಯಾಣ ಲಿಂಗಾಯತ ಧರ್ಮದ ಎರಡು ಕಣ್ಣುಗಳಿದ್ದಂತೆ. ಕೊಳಚೆ ಪ್ರದೇಶದಂತಿದ್ದ ಕೂಡಲ ಸಂಗಮವನ್ನು ಟ್ರಸ್ಟ್ ಮೂಲಕ ಅಭಿವೃದ್ಧಿಪಡಿಸಲಾಗಿದೆ. ದುಃಸ್ಥಿತಿಯಲ್ಲಿದ್ದ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನದ ಸಂಕಲ್ಪದೊಂದಿಗೆ ಬಸವ ಮಹಾಮನೆ ಹೆಸರಿನಲ್ಲಿ ಯೋಜನೆ ರೂಪಿಸಲಾಗಿದೆ. ವಿಶ್ವದ ಅತಿ ಎತ್ತರದ ಬಸವ ಪ್ರತಿಮೆ, ಶರಣ ಗ್ರಾಮ, ಶರಣ ಶೈಲ ನಿರ್ಮಾಣ ಮಾಡಿ ಕಲ್ಯಾಣದ ಕ್ರಾಂತಿಗೆ ಕಾರಣವಾದ ಸನ್ನಿವೇಶಗಳನ್ನು ಅನಾವರಣಗೊಳಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಪೂಜ್ಯ ಮಾತಾಜಿ ವಿವರಿಸಿದರು.

ಕಲ್ಯಾಣ ಪರ್ವ ಸಮಾರಂಭವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಉತ್ಸವ ಸಮಿತಿ ಕಾರ್ಯಾಧ್ಯಕ್ಷ - ವಸತಿ ಸಚಿವ ವಿ. ಸೋಮಣ್ಣ ಮಾತನಾಡಿ ರಾಷ್ಟ್ರದ ಸಾಮಾಜಿಕ ನ್ಯಾಯ ಬದ್ಧತೆಯನ್ನು ಎತ್ತಿ ಹಿಡಿಯುವುದಕ್ಕೆ ಬಸವಣ್ಣನವರ ಆಚಾರ ವಿಚಾರಗಳು ಇನ್ನೂ ಜೀವಂತವಾಗಿ ಉಳಿದಿವೆ ಎಂಬುದಕ್ಕೆ ಪೂಜ್ಯ ಶ್ರೀ ಮಾತಾಜಿಯವರ ಅದ್ಭುತ ಕಾರ್ಯಗಳು ಸಾಕ್ಷಿಯಾಗಿವೆ. ಅಂದಿನ ಕಲ್ಯಾಣ ಗತವೈಭವವನ್ನು ಮರುಕಳಿಸುವ ನಿಟ್ಟಿನಲ್ಲಿ ಪೂಜ್ಯ ಮಾತಾಜಿಯವರು ಕೈಗೊಂಡಿರುವ ಕೆಲಸಗಳು ಅವಿಸ್ಮರಣೀಯ ಎಂದರು.

ಒಳ್ಳೆಯ ಕೆಲಸ ಮಾಡುವಾಗ ನಿಂದಕರು ಇರುವುದು ಸಹಜವೇ! ನಿಂದಕರಿಲ್ಲದಿದ್ದರೆ ಏನನ್ನೂ ಮಾಡಲು ಸಾಧ್ಯವಾಗುವುದಿಲ್ಲ. ರಾಜ ಬಿಜ್ಜಳನ ಆಸ್ಥಾನದಲ್ಲಿ ಕೊಂಡಿ ಮಂಚಣ್ಣ ಇರದಿದ್ದರೆ ಶ್ರೀ ಗುರು ಬಸವಣ್ಣನವರು ಪ್ರಬುದ್ಧ ಮಾನವರಾಗಿ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ತಾವು ಕೈಗೊಳ್ಳುವ ತೀರ್ಮಾನಗಳು ಈ ರಾಷ್ಟ್ರಕ್ಕೆ ಪೂರಕವಾದ ಸಂದೇಶ ನೀಡುತ್ತವೆ ಎಂದು ಹೇಳಿ ಕಲ್ಯಾಣ ಪರ್ವ ವಿರೋಧಿಗಳಿಗೆ ಎಚ್ಚರಿಕೆ ನೀಡಿದರು. ಮುಂದುವರೆದು ಮಾತನಾಡಿದ ಅವರು ಪೂಜ್ಯ ಮಾತಾಜಿಯವರು ಒಬ್ಬ ಸಾಮಾನ್ಯ ಹೆಣ್ಣುಮಗಳಲ್ಲ ; ಮಾತ್ರವಲ್ಲ ಅವರು ದೈವೀ ಸ್ವರೂಪಿಗಳು. ನಾವುಗಳು ದೇವರನ್ನು ಪ್ರತ್ಯಕ್ಷವಾಗಿ ನೋಡಿಲ್ಲ. ಆದರೆ ಅಂಥ ಅದ್ಭುತ ಕಲ್ಯಾಣ ಕ್ರಾಂತಿಯನ್ನು, ಮುಂದಿನ ಪೀಳಿಗೆಗೆ ಪರಿಚಯ ಮಾಡಿಕೊಡುವ ಅದ್ಭುತ ಕಾರ್ಯವನ್ನು ಪೂಜ್ಯ ಮಾತಾಜಿಯವರು ಮಾಡಿದ್ದಾರೆ.

ಗುರು ಬಸವಣ್ಣನವರ ವಿಚಾರ ಧಾರೆಗಳನ್ನು ಮುಂದಿನ ಎಷ್ಟು ಯುಗಗಳವರೆಗೆ ಆಚರಣೆ ಮಾಡುತ್ತಾರೆಯೋ ಅಲ್ಲಿಯವರೆಗೆ ಪೂಜ್ಯ ಮಾತಾಜಿಯವರ ಈ ಕಾಣಿಕೆಯನ್ನು

ನೆನಪಿಸುತ್ತಾರೆ ಎಂದು ಬಣ್ಣಿಸಿದರು. ವಿಶ್ವದ ಅತಿ ಎತ್ತರದ ಪುತ್ಥಳಿ ಹಾಗೂ ಶರಣ ಗ್ರಾಮವನ್ನು ನಿರ್ಮಿಸಿದ ಆ ಕಲಾವಿದರ ನೈಪುಣ್ಯತೆ ಪ್ರಶಂಸಾರ್ಹ ಹಾಗೂ ಅಭಿನಂದನೀಯ ಎಂದು ನುಡಿದ ಸಚಿವರು ಶೀಘ್ರದಲ್ಲಿ ಚಿತ್ರಕಲಾ ಪರಿಷತ್ ತಂಡವನ್ನು ಅಧ್ಯಯನಕ್ಕಾಗಿ ಕಳುಹಿಸಲಾಗುವುದು. ಶ್ರೀ ಗುರು ಬಸವಣ್ಣನವರ ದಿವ್ಯ ಸಂದೇಶಗಳನ್ನು ಜನಮಾನಸಕ್ಕೆ ತಲ್ಪಿಸುವದರ ಜೊತೆಗೆ ಕಲಾವಿದರೂ ಬದುಕಲು, ಕಲೆ ಉಳಿಯಲು ಮಾತಾಜಿ ಕೊಡುಗೆಯು ಈ ಮೂಲಕ ಅಪಾರ ಹಾಗೂ ಅಭಿನಂದನೀಯ ಎಂದರಲ್ಲದೇ ಬಸವ ಕಲ್ಯಾಣ ವಿಶ್ವದ ಭೂಪಟದಲ್ಲಿ ಕಾಣಲು ಮಾತಾಜಿ ಏಕೈಕ ಕಾರಣ ಎಂದು ಸಚಿವ ವಿ. ಸೋಮಣ್ಣ ನುಡಿದರು. ಬಸವ ಮಹಾಮನೆಯು ಲಿಂಗಾಯತ ಧರ್ಮ ಅಂದರೆ ವಿಶ್ವಧರ್ಮ ಸಂದೇಶ ಸಾರುವ ಭವ್ಯ ದೇಗುಲವಾಗಿದೆ. ಈ ಬಸವ ಕಲ್ಯಾಣ ಮುಂದಿನ ಹತ್ತು ವರ್ಷಗಳಲ್ಲಿ ರಾಜ್ಯದ ಪ್ರಮುಖ ಪ್ರವಾಸಿ ತಾಣವಾಗಿ ಗುರುತಿಸಿಕೊಳ್ಳಲಿದೆ. ಇಲ್ಲಿ ಪೂಜ್ಯ ಮಾತಾಜಿ ಪ್ರಾರಂಭಿಸಲಿರುವ ಉಚಿತ ದಾಸೋಹ ನಿಲಯಕ್ಕೆ ವಿಧಾನ ಪರಿಷತ್ ಸದಸ್ಯರ ನಿಧಿಯಿಂದ 25 ಲಕ್ಷ ರೂ.ಗಳ ಅನುದಾನ ನೀಡುವುದಾಗಿ ವಚನವಿತ್ತರು.

ಭಾವತುಂಬಿ ನುಡಿದ ಸೋಮಣ್ಣ ವಿಶ್ವಕ್ಕೆ ಸಮಾನತೆಯ ಸಂದೇಶವನ್ನು ಸಾರಿದ ವಿಶ್ವಗುರು ಬಸವಣ್ಣನವರು ಮಾಡಿದ ಕಾರ್ಯವನ್ನು ನಮ್ಮೆಲ್ಲರಿಗೆ ನೋಡುವ ಭಾಗ್ಯ ಸಿಗಲಿಲ್ಲ ಈಗ ಸೂರ್ಯ ಮತ್ತು ಚಂದ್ರ ಇರುವವರೆಗೆ ಶಾಶ್ವತವಾಗಿ ಉಳಿಯುವಂತೆ ಕೆಲಸವನ್ನು ಮಾಡಿರುವ ಪೂಜ್ಯ ಮಾತಾಜಿಯವರು ದೈವೀಶಕ್ತಿಯಾಗಿದ್ದು ಅವರ ಚಿಂತನೆಗಳು ನಮಗೆಲ್ಲ ಸ್ಫೂರ್ತಿ. ಅವರು ಗುರು ಬಸವಣ್ಣನವರ ಇನ್ನೊಂದು ಪ್ರತಿರೂಪ ಎಂದರೆ ತಪ್ಪಲ್ಲ ಎಂದರು.

ರಾಜ್ಯದ ಹಿರಿಯ ಐ.ಎ.ಎಸ್ ಅಧಿಕಾರಿ ಕೃಷಿ ಮಾರುಕಟ್ಟೆ ಮಂಡಳಿ ನಿರ್ದೇಶಕ ಹಾಗೂ ಅಬಕಾರಿ ಆಯುಕ್ತ ಡಾ॥ ಸಿ.ಸೋಮಶೇಖರ್ ಮಾತನಾಡಿ "ಈ ಐತಿಹಾಸಿಕ 11ನೇ ಕಲ್ಯಾಣ ಪರ್ವ ನೋಡಿದರೆ 12ನೇ ಶತಮಾನ ಮರುಕಳಿಸಿದಂತಾಗುತ್ತದೆ. ಡಾ॥ ಅಂಬೇಡ್ಕರರು ಆಡಳಿತಾತ್ಮಕ ಸಂವಿಧಾನ ನೀಡಿದ್ದಾರೆ. ಆದರೆ ಗುರು ಬಸವಣ್ಣನವರು ನೀಡಿದ ಸಂವಿಧಾನ ಇದಕ್ಕಿಂತ ಮೌಲ್ಯಯುತವಾದುದು ಇದಕ್ಕೆ ತಿದ್ದುಪಡಿ ಎಂಬುದೇ ಇಲ್ಲ. ಚಿರನೂತನ ಶಾಶ್ವತ ನಮ್ಮ ವಚನ ಸಾಹಿತ್ಯ ಸಂವಿಧಾನ" ಎಂದು ಹೃದಯ ತುಂಬಿ ನುಡಿದರು. ಅಧ್ಯಕ್ಷತೆ ವಹಿಸಿದ್ದ ಧಾರವಾಡ ಮಾಜಿ ಸಂಸದ ಮಂಜುನಾಥ ಕುನ್ನೂರ ಮಾತನಾಡಿ "ನನಗೆ ಇಂದಿನ ದಿನ ಜೀವನದಲ್ಲಿ ಸದಾ ನೆನಪಿಡುವ ದಿನ. ಪೂಜ್ಯ ಮಾತಾಜಿಯವರು ಮಾಡಿದ ಈ ದೈವೀ ಕಾರ್ಯ ನಮ್ಮ ಸಮಾಜದ ಐತಿಹಾಸಿಕ ಘಟನೆಯಾಗಿದೆ. ಶ್ರೀ ಗುರು ಬಸವಣ್ಣನವರು ಹಾಗೂ ಎಲ್ಲ ಶರಣರು ನವ ಧರ್ಮ ಸ್ಥಾಪಿಸಿದ ಈ ಪವಿತ್ರ ಬಸವ ಕಲ್ಯಾಣದಲ್ಲಿ ನಾನು ಇಂದು ಬಂದು ಕಲ್ಯಾಣ ಪರ್ವದಲ್ಲಿ ಪಾಲ್ಗೊಂಡಿದ್ದು ನನ್ನ ಪುಣ್ಯ ವಿಶೇಷ. ನಮ್ಮ ಮನೆದೇವರು ಶ್ರೀ ಚನ್ನಬಸವಣ್ಣನವರು ಎಂದು ಪರಂಪರಾಗತವಾಗಿ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದೇವೆ. ಆದರೆ ಅವರೂ ಸೇರಿದಂತೆ ಎಲ್ಲ 770 ಮುಕ್ತಾತ್ಮರು ಆಗಿ ಹೋಗಿರುವ ಈ ಪವಿತ್ರ ಸ್ಥಳಕ್ಕೆ ಬಂದಿದ್ದು ಈ ಐತಿಹಾಸಿಕ 108 ಅಡಿ ಬಸವೇಶ್ವರರ ಪ್ರತಿಮೆ ದರ್ಶಿಸಿದ್ದು ನಿಜಕ್ಕೂ ನನ್ನ ಭಾಗ್ಯ" ಎಂದು ಭಾವ ತುಂಬಿ ನುಡಿದರು.

ನವದೆಹಲಿ ಬಸವ ಮಂಟಪದ ಮುಖ್ಯಸ್ಥರೂ ಬಸವ ಗಂಗೋತ್ರಿಯ ಶ್ರೀ ಚನ್ನ ಬಸವೇಶ್ವರ ಜ್ಞಾನಪೀಠದ ಪ್ರಥಮಾಧ್ಯಕ್ಷರೂ ಆದ ಶ್ರೀ ಜಗದ್ಗುರು ಚನ್ನಬಸವಾನಂದ ಮಹಾಸ್ವಾಮೀಜಿ, ಮಾಜಿ ಎಮ್ಮೆಲ್ಸಿ ಮಾರುತಿರಾವ್ ಮಾಲೆ, ಮುಖಂಡರಾದ ಬಿ.ನಾರಾಯಣರಾವ್, ಹರೀಶ್ ಆರಾಧ್ಯ, ಶಿವರಾಜ ನರಶೆಟ್ಟಿ, ಸುರೇಶ ಸಜ್ಜನ, ಶ್ರೀಕಾಂತ ಸ್ವಾಮಿ ಉಪಸ್ಥಿತರಿದ್ದರು. ರೇಲ್ವೆ ಅಭಿಯಂತರು ಸಚ್ಚಿದಾನಂದ ಚಟನಳ್ಳಿ ಸ್ವಾಗತಿಸಿದರು.

ಮಹಾರಾಷ್ಟ್ರದ ತಮಲೂರು ಮಠದ ಶ್ರೀ ಷ.ಬ್ರ. ಶಿವಾನಂದ ಶಿವಾಚಾರ್ಯ ಮಹಾಸ್ವಾಮೀಜಿ ಬಸವ ಧ್ವಜಾರೋಹಣ ನೆರವೇರಿಸಿದರು. ಮೈಸೂರಿನ ಕೆ.ಎಂ.ಶಿವಶಂಕರ್, ಬೀದರ್ ಶರಣೆ ನೀಲಮ್ಮ ಲಿಂ॥ ವೀರಬಸಪ್ಪ ಪಾಟೀಲ್, ಇಂದುಧರ್ ಅಣ್ಣೆಪ್ಪ ಮಂಗಲಗಿ ದಾಸೋಹ ಸೇವೆ ನೆರವೇರಿಸಿ ಕೊಟ್ಟರು. ಕುಮಾರಿ ಸ್ವಾತಿ ಮತ್ತು ಶೃತಿ ವಚನಾಭಿನಯ ನೆರವೇರಿಸಿದರು.

ಅದೇ ದಿವಸ ಸಂಜೆಯ ಚಿಂತನಗೋಷ್ಠಿಯಲ್ಲಿ ಬಸವ ಕಲ್ಯಾಣದ ಶ್ರೀ ಜಂಗಮಮೂರ್ತಿಗಳಾದ ಪೂಜ್ಯ ಶ್ರೀ ಬಸವ ಪ್ರಭು ಸ್ವಾಮೀಜಿ ಬಸವ ಧ್ವಜಾರೋಹಣ ನೆರವೇರಿಸಿದರು. ಬೀದರನ ಹಿರಿಯ ನ್ಯಾಯವಾದಿ ಗಂಗಶೆಟ್ಟಿ ಪಾಟೀಲರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಬೆಳಗಾವಿಯ ಜಗದ್ಗುರು ಬಸವ ಪ್ರಭು ಸ್ವಾಮೀಜಿ ಸನ್ನಿಧಿಯಲ್ಲಿ, ಉಪನ್ಯಾಸ ನೀಡಿದ ಬೈಲೂರು ನಿಷ್ಕಲ ಮಂಟಪದ ಶ್ರೀ ನಿಜಗುಣಾನಂದ ಸ್ವಾಮೀಜಿ ಮಾತನಾಡಿ' "ಪರಮ ಪೂಜ್ಯ ಲಿಂಗಾನಂದ ಮಹಾಸ್ವಾಮಿಯವರು ನನ್ನನ್ನು ಗುರುತಿಸಿ ಬೆಳೆಸಿದ ಕಾರಣದಿಂದ ನಾನಿಂದು ಧರ್ಮಪ್ರಚಾರದ ಕಾರ್ಯದಲ್ಲಿ ತೊಡಗಿಕೊಂಡಿದ್ದೇನೆ. ಮಾತಾಜಿಯವರು ನನ್ನ ಗುರುಗಳು ಅವರ ಕೃಪಾಕಟಾಕ್ಷದಲ್ಲಿ ಬೆಳೆದಿರುವ ನಾನು ಅವರಿಗೆ ನಾನೆಂದಿಗೂ ಚಿರಋಣಿ ಎಂದರು. ಮಹಾಜಗದ್ಗುರು ಮಾತಾಜಿಯವರ ಮಧುರ ಕಂಠದಲ್ಲಿ ನಡೆದ ನೆನಹು ಸಮಸ್ತ ಶರಣ ಲೋಕವನ್ನು ಅಧ್ಯಾತ್ಮಿಕ ಅನುಭೂತಿಯಲ್ಲಿ ತೇಲಾಡಿಸಿತು. ಸವದತ್ತಿಯ ವರ್ತಕ ಆನಂದ ಚೋಪ್ರಾ ದಾಸೋಹ ಸೇವೆ ನೆರವೇರಿಸಿದರು. ಅಕ್ಕಮಹಾದೇವಿ ಕಂಬಾರಗಣವಿ, ನಿಸರ್ಗಾ ನಾಗರಾಜು ಅವರ ವಚನಾಭಿನಯ ವಿಶೇಷ ಆಕರ್ಷಣೆಯಾಗಿತ್ತು. ಬೀದರ್ ಲಿಂಗಾಯತ ಸಮಾಜದ ಅಧ್ಯಕ್ಷ ಕುಶಲರಾವ್ ಪಾಟೀಲ್ ಬೀದರ ಲಿಂಗಾಯತ ಧರ್ಮ ಮಹಾಸಭಾದ ಶಿವರಾಜ ಪಾಟೀಲ್ ಅತಿವಾಳ, ಉದ್ಯಮಿ ಎನ್. ನಂಜುಂಡೇಶ್, ಉತ್ತರ ಕರ್ನಾಟಕ ಪತ್ರಿಕೆಯ ಸಂಪಾದಕ ಶಿವಶರಣಪ್ಪ ವಾಲಿ ಇತರರು ಉಪಸ್ಥಿತರಿದ್ದರು. ಭದ್ರಾವತಿಯ ಗಂಗಾಂಬಿಕಾ ಬಸವರಾಜ ಅವರಿಂದ ಸ್ವಾಗತ, ಕಲಬುರ್ಗಿಯ ಆರ್.ಜಿ.ಶೆಟಗಾರ ಅವರಿಂದ ಸಭಾ ನಿರ್ವಹಣೆ ಜರುಗಿದವು.

28-10-2012 ಈ ದಿನ ಎಂದಿನಂತಿರಲಿಲ್ಲ. ಹೌದು ಇದೊಂದು ವಿಶೇಷ ದಿನ. ಲಿಂಗಾಯತ ಧರ್ಮದ ಇತಿಹಾಸದಲ್ಲಿಯೇ ಸುವರ್ಣಾಕ್ಷರಗಳಿಂದ ಬರೆದಿಡುವಂತಹುದು. ಈ ಪವಿತ್ರ ಗಳಿಗೆಗೆ ಸಾಕ್ಷಿಯಾಗಿ ಎಲ್ಲರ ಜೀವನವೂ ಧನ್ಯ-ಮಾನ್ಯ.

ಲಿಂಗಾಯತ ಧರ್ಮ ಸಂಸ್ಥಾಪಕ, ವಿಶ್ವಗುರು ಮಹಾಮಾನವತಾವಾದಿ, ಮಂತ್ರಪುರುಷ ಬಸವಣ್ಣನವರ 108 ಅಡಿ ಪುತ್ಥಳಿಯು ಲೋಕಾರ್ಪಣೆಗೊಂಡ ಐತಿಹಾಸಿಕ ದಿನವಿದು.

ಅಂದು ಪ್ರಾತಃಕಾಲ ಮಿಂದು ಷಟ್ಕೋನ ಸಹಿತ ಕಾಷಾಯ ವರ್ಣದ ಸ್ಕಾರ್ಫ್ ಧರಿಸಿದ ಶರಣ ಶರಣೆಯರು ಶರಣ ಶೈಲದಲ್ಲಿರುವ ಗುರು ಬಸವಣ್ಣನವರ ಪ್ರತಿಮೆಯ ಬಳಿ ಸಮಾವೇಶಗೊಳ್ಳುತ್ತಿದ್ದರು. ನೋಡ ನೋಡುತ್ತಿದ್ದಂತೆ ನಾಡಿನ-ದೇಶದ ವಿವಿಧ ಭಾಗಗಳಿಂದ 'ನ ಭೂತೋ ನ ಭವಿಷ್ಯತಿ' ಎನ್ನುವಂತೆ ಜನ ಸಾಗರವೇ ಹರಿದು ಬರತೊಡಗಿತು. ಎಲ್ಲ ದಾರಿಗಳೂ ಕಲ್ಯಾಣದ ಕಡೆಗೆ ಎನ್ನುವಂತೆ ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಬಸವ ಭಕ್ತರ ಸಾಗರವೇ ಸೇರಿತು.

ಬೃಹತ್ ಪ್ರತಿಮೆಯ ವಿರಾಜಮಾನವಾಗಿರುವ 24 ಅಡಿ ಪೀಠದ ಕೆಳಗಡೆ ಪ್ರತಿಷ್ಠಾಪಿಸಿರುವ ಸುಂದರ-ಗುರುಬಸವಣ್ಣನ ಪ್ರತಿಮೆಗೆ ಪರಮಪೂಜ್ಯ ಮಹಾಜಗದ್ಗುರು ಶ್ರೀ ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಪೂಜ್ಯ ಶ್ರೀ ಜಗದ್ಗುರು ಗಂಗಾದೇವಿಯವರು ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಜಿ ಪೂಜಾವ್ರತ ಮುಗಿಸುವುದರೊಳಗಾಗಿ ಅಬ್ಬಾ ॥ ನೋಡಲು ಎರಡು ಕಣ್ಣುಗಳು ಸಾಲವು. 21 ಎಕರೆ ವಿಶಾಲ ಪ್ರದೇಶದಲ್ಲಿ ಎಲ್ಲೆಂದರಲ್ಲಿ

ಜನವೋ ಜನ. ಕಣ್ಣಳತೆಗೂ ಮಿಕ್ಕಿ ಜನ ಸಾಗರ. ವಿಶ್ವಗುರು ಬಸವಣ್ಣನವರಿಗೆ ಜಯವಾಗಲಿ. ಪೂಜ್ಯ ಮಾತಾಜಿಯವರಿಗೆ ಜಯವಾಗಲಿ ಎಂಬ ಮುಗಿಲು ಮುಟ್ಟುವ ಘೋಷಣೆಗಳು ಕಲ್ಯಾಣದಲ್ಲಿ ಪ್ರತಿಧ್ವನಿಸುತ್ತಿದ್ದವು. ಸಮಾವೇಶಗೊಂಡಿದ್ದ ಎಲ್ಲ ಜನಸ್ತೋಮದಲ್ಲಿ ಧನ್ಯತಾ ಭಾವ ತುಂಬಿತ್ತು. ಎಲ್ಲರ ಕಣ್ಣಾಲಿಗಳಲ್ಲಿ ಆನಂದ ಬಾಷ್ಪ ಜಿನುಗುತ್ತಿತ್ತು. ಹೌದು, ನಮ್ಮೆಲ್ಲರ ಜೀವನ ಸಾರ್ಥಕವಾದ ಮಧುರ ಗಳಿಗೆಯಿದು. ವಿಶ್ವಗುರು - ನಮ್ಮ ಧರ್ಮ ಸಂಸ್ಥಾಪಕ ಅಪ್ಪ ಬಸವಣ್ಣನವರ ಪ್ರಸನ್ನವದನದ ಪುತ್ಥಳಿ ವಿಧ್ಯುಕ್ತವಾಗಿ ಲೋಕಾರ್ಪಣೆಗೊಳ್ಳುವ ಆ ಕ್ಷಣವನ್ನು ಕಣ್ತುಂಬಿಕೊಳ್ಳಲು ಎಲ್ಲರೂ ಕಾತರಿಸುತ್ತಿದ್ದಂತೆ, ಮಹಾಜಗದ್ಗುರು ಮಾತೆ ಮಹಾದೇವಿಯವರು ಬಸವ ಧ್ವಜಾರೋಹಣಗೈದರು. ನಾಡಿನ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ನಡೆದು ಬಂದು ಪೂಜ್ಯ ಮಾತಾಜಿಯವರಿಗೆ ಗುರುವಂದನೆ ಸಲ್ಲಿಸಿ ಲಕ್ಷ ಲಕ್ಷ ಜನತೆಯ ಮುಗಿಲು ಮುಟ್ಟುವ ಜಯಕಾರದ ಮಧ್ಯ ವಿಶ್ವದ ಅತಿ ಎತ್ತರದ ಗುರು ಬಸವಣ್ಣನವರ ಪ್ರತಿಮೆಯನ್ನು ತೆರೆ ಎಳೆಯುವ ಮೂಲಕ ಲೋಕಾರ್ಪಣೆಗೊಳಿಸಿದರು.

ಬಹುಶಃ ನಾಡಿನ ಯಾವ ರಾಜಕಾರಣಿಗಳಿಗೂ ಎಷ್ಟು ಜನ್ಮವೆತ್ತಿದರೂ ಸಿಗಲಾರದ ಮಹಾನ್ ಸೌಭಾಗ್ಯವನ್ನು ಪಡೆದ ಯಡಿಯೂರಪ್ಪ ಧನ್ಯರಾದರು.

ಪ್ರತಿಮೆ ಲೋಕಾರ್ಪಣೆಗೊಂಡ ತರುವಾಯ ವೇದಿಕೆಯಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಉದ್ಘಾಟನಾ ಪರ ಮಾತನಾಡಿದ ಯಡಿಯೂರಪ್ಪನವರು, "ವಿಶ್ವಗುರು ಬಸವಣ್ಣನವರ ಕರ್ಮಭೂಮಿ ಬಸವಕಲ್ಯಾಣ ಅಂತಾರಾಷ್ಟ್ರೀಯ ಪ್ರವಾಸಿ ಕೇಂದ್ರವಾಗಬೇಕು. ಬಸವಣ್ಣ , ಅಂಬೇಡ್ಕರ್ ನಡೆದಾಡಿದ ಈ ನಾಡಿಗೆ ಜಗತ್ತಿನ ಮೂಲೆ ಮೂಲೆಗಳಿಂದ ಪ್ರವಾಸಿಗರು ಬರುವಂತೆ ಆಗಬೇಕು." ಎಂದು ಆಶಿಸಿದರು.

ಕೂಡಲ ಸಂಗಮದ ಮಾದರಿಯಂತೆ ಬಸವ ಕಲ್ಯಾಣ ಸಹ ಅಂತಾರಾಷ್ಟ್ರೀಯ ಪ್ರವಾಸಿ ತಾಣವಾಗಬೇಕು. 12ನೆಯ ಶತಮಾನದಲ್ಲಿ ಜಗತ್ತಿಗೆ ಸಮಾನತೆ ಸಂದೇಶ ಸಾರಿದ ಪವಿತ್ರ ಕ್ಷೇತ್ರ ಇದಾಗಿದೆ. ಅಂದಿನ ವೈಭವವನ್ನು ಮರಳಿಸುವ ಉದ್ದೇಶದಿಂದ ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆ. 40ರಿಂದ 50 ಕೋಟಿ ರೂ.ದ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ" ಎಂದರು.

ಬೆಂಗಳೂರಿನಲ್ಲಿ ವಿಶ್ವಗುರು ಬಸವಣ್ಣನವರ ಸಂಶೋಧನಾ ಕೇಂದ್ರ ಸ್ಥಾಪಿಸಲಾಗುತ್ತಿದೆ. ಇದರ ಕಾಮಗಾರಿ ಪ್ರಾರಂಭಿಸಲು ಬಜೆಟ್‌ನಲ್ಲಿ 40 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಗುರು ಬಸವಣ್ಣನವರು ಸಾರಿದ ಸಂದೇಶದ ವಚನಗಳು ದೇಶಾದ್ಯಂತ ಎಲ್ಲ ಭಾಷೆಗಳಲ್ಲಿ ಭಾಷಾಂತರಗೊಳ್ಳಬೇಕು ಈ ಮೂಲಕ ವಿಚಾರಧಾರೆಗಳು ಪ್ರತಿಯೊಬ್ಬರಿಗೂ ತಲುಪುವಂತಾಗಬೇಕು. ಗುರು ಬಸವಣ್ಣನವರ ಚಿಂತನೆಗಳಂತೆ ನಡೆದು ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಎಲ್ಲ ಜನಾಂಗದ ಅಭಿವೃದ್ಧಿಗೆ ಚಿಂತನೆ ಮಾಡಿ ಕೆಲಸ ಮಾಡಿದ್ದೇನೆ" ಎಂದರು.

ಬಸವಾದಿ ಪ್ರಮಥರು ನುಡಿದಂತೆ ನಡೆದು ತೋರಿಸಿದ್ದರು. ನಡೆ ನುಡಿಗಳಲ್ಲಿ ಸಮನ್ವಯತೆಯನ್ನು ಅವರು ಮೈಗೂಡಿಸಿಕೊಂಡಿದ್ದರಿಂದಾಗಿ ಅವರು ಯಾವಾಗಲೂ ಆದರ್ಶರು, ಪೂಜ್ಯರು ಆಗಿದ್ದಾರೆ. ಇದು ನಮ್ಮ ಭಾರತ ದೇಶದ ವೈಶಿಷ್ಟ್ಯವಾಗಿದೆ. ಈಗ ಜಗತ್ತು ನಮ್ಮ ಕಡೆಗೆ ನೋಡುತ್ತಲಿದೆ. 21ನೆಯ ಶತಮಾನ ಭಾರತೀಯರ ಶತಮಾನ. ಶರಣ ಶರಣೆಯರಿಗೆ ಜನ್ಮ ಕೊಟ್ಟ ಈ ಪುಣ್ಯಭೂಮಿ ಕರ್ಮಭೂಮಿಯಾಗಿದೆ ಎಂದು ನುಡಿದರು. ಮುಂದುವರಿದು ಮಾತನಾಡಿದ ಯಡಿಯೂರಪ್ಪ "ನನ್ನ ಆಡಳಿತಾವಧಿಯಲ್ಲಿ ಜಾತಿ-ವರ್ಗ-ಮತ, ಪಂಥ ಎನ್ನದೇ ಪ್ರಗತಿಯ ಕೆಲಸ ಮಾಡಿದ್ದೇನೆ. ಎಲ್ಲ ಸಮಾಜದ ಧಾರ್ಮಿಕ ಕೇಂದ್ರಗಳಿಗೆ ಆರ್ಥಿಕ ನೆರವು

ನೀಡಿದ್ದೇನೆ. ಆದರೂ ಅಪವಾದಗಳು ಬಂದವು. ಇದರ ಬಗ್ಗೆ ತಲೆ ಕೆಡಿಸಿಕೊಳ್ಳುವವ ನಾನಲ್ಲ. ಮನಸ್ಸಾಕ್ಷಿಯಾಗಿ ಒಳ್ಳೆಯ ಕೆಲಸ ಮಾಡಲು ಯಾವತ್ತೂ ಹಿಂಜರಿಯುವುದಿಲ್ಲ. ಕನ್ನಡಿಗರ ಸೇವೆಯ ಕೈಂಕರ್ಯ ತೊಟ್ಟಿದ್ದೇನೆ. ಪ್ರಾಣ ಇರುವವರೆವಿಗೂ ಸೇವೆ ಸಲ್ಲಿಸುತ್ತೇನೆ. ನಾಡಿನ ಜನತೆ ನನಗೆ ಶಕ್ತಿ ತುಂಬಬೇಕು" ಎಂದು ಮನವಿ ಮಾಡಿದರು. ಜನ ಸೇವೆಯನ್ನು ಧ್ಯೇಯ-ವಾಗಿಟ್ಟುಕೊಂಡು ದುಡಿಯುತ್ತಿರುವ ನನ್ನಂಥ ಸಾಮಾನ್ಯ ವ್ಯಕ್ತಿಗೆ ಮುಖ್ಯಮಂತ್ರಿ ಪದವಿ ಸಿಕ್ಕಿತು. ಗುರು ಬಸವಣ್ಣನವರ ಚಿಂತನೆಯಂತೆ ಯಾವುದಕ್ಕೂ ಅಪಚಾರವಾಗದಂತೆ ನನ್ನ ಅಧಿಕಾರಾವಧಿಯಲ್ಲಿ ನಡೆದುಕೊಂಡಿದ್ದೇನೆ.

ಎಲ್ಲ ಸಮಾಜ ಬಾಂಧವರ ವಿಕಾಸಕ್ಕೆ ದುಡಿದಿದ್ದೇನೆ. ಬಸವ ಕಲ್ಯಾಣದ ಅಭಿವೃದ್ಧಿಗೆ ನಾನು ವಿಶೇಷ ಒತ್ತು ಕೊಟ್ಟಿದ್ದೇನೆ. ಆದರೆ ಅದೇಕೋ ನನ್ನ ನಂತರದಲ್ಲಿ ಅಷ್ಟೊಂದು ವೇಗ ಕಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗುರು ಬಸವಣ್ಣನವರ ತತ್ತ್ವ ಆದರ್ಶ ಸರ್ವಕಾಲಿಕ, ಶ್ರೇಷ್ಠ, ಅನುಭವ ಮಂಟಪದ ಮೂಲಕ 850 ವರ್ಷಗಳ ಹಿಂದೆಯೇ ಗುರು ಬಸವಣ್ಣನವರು ಇಡೀ ವಿಶ್ವಕ್ಕೆ ಪ್ರಜಾಪ್ರಭುತ್ವದ ಪರಿಕಲ್ಪನೆ ನೀಡಿದರು. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಬಸವತತ್ತ್ವ ಯಾರಿಗೆ ತಾನೆ ಬೇಡ? ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ತತ್ತ್ವವನ್ನು ಅಕ್ಷರಶಃ ಕಾರ್ಯರೂಪಕ್ಕೆ ತಂದರು. ಶರಣರ ನಡೆ ನುಡಿ ಸಿದ್ಧಾಂತ ಪರಿಪಾಲಿಸಿದರೆ ಈ ನಾಡಿನ ಸರ್ವಾಂಗೀಣ ಉನ್ನತಿ ಸಾಧ್ಯವಿದೆ. ಇಂದು ಇಡೀ ವಿಶ್ವವೇ ನಮ್ಮತ್ತ ನೋಡುತ್ತಲಿದೆ. ನಮ್ಮ ಅಧ್ಯಾತ್ಮ ಶಕ್ತಿಯ ಮುಂದೆ ಎಲ್ಲವೂ ಗೌಣ." ಎಂದರು.

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗೆ ಅಂಜಿದೊಡೆಂತಯ್ಯ
ಸಮುದ್ರದ ತಡಿಯಲೊಂದು ಮನೆಯ ಮಾಡಿ'
ನೊರೆ ತೆರೆಗಳಿಗಂಜಿದೊಡೆಂತಯ್ಯ
ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯಾ
ಚನ್ನಮಲ್ಲಿಕಾರ್ಜುನದೇವ ಕೇಳಯ್ಯಾ
ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ-ನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ಈ ವಚನ ನನಗೆ ಭರಪೂರ ಅನ್ವಯಿಸುತ್ತದೆ. ನನ್ನಂತಹವರಿಗೆ ಇದನ್ನು ಬರೆದಂತಿದೆ." ಎಂದು ಇತ್ತೀಚಿನ ರಾಜಕೀಯ ಘಟನಾವಳಿಗಳ ಬಗ್ಗೆ ತಮ್ಮ ಮನದಾಳದ ಭಾವೋದ್ವೇಗಗಳನ್ನು ತೋಡಿಕೊಂಡರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಇಂಧನ ಸಚಿವೆ ಶೋಭಾ ಕರಂದ್ಲಾಜೆ, "ವಿಶ್ವಗುರು ಬಸವಣ್ಣನವರ ತತ್ತ್ವ ಪ್ರಸರಣ ಕಾರಣದಿಂದಾಗಿ ಕರ್ನಾಟಕ ರಾಜ್ಯದಲ್ಲಿ ಮತಾಂತರದ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ನೆರೆಯ ರಾಜ್ಯಗಳಾದ ಕೇರಳ ಹಾಗೂ ಆಂಧ್ರಗಳಲ್ಲಿ ಗುರು ಬಸವ ಸಿದ್ಧಾಂತದಂಥ ಪ್ರಖರ ಸಮಾಜವಾದಿ ಸಮಾನತಾ ತತ್ವಗಳಿಲ್ಲದಿರುವುದರಿಂದ ಆ ರಾಜ್ಯಗಳಲ್ಲಿ ಬೇರೆ ಧರ್ಮಗಳಿಗೆ ಗಣನೀಯ ಪ್ರಮಾಣದಲ್ಲಿ ಮತಾಂತರ ನಡೆಯುತ್ತಲಿದೆ" ಎಂದು ವಿಶ್ಲೇಷಿಸಿದ ಸಚಿವೆ ಸ್ತ್ರೀಯರಿಗೆ ಬೆಲೆಯೇ ಇಲ್ಲದ ಸಂದರ್ಭದಲ್ಲಿ ವಿಶ್ವಗುರು ಬಸವಣ್ಣನವರು ಸಮಾನ ಸ್ಥಾನ ಕೊಟ್ಟರು. ಅಂಥ ಮಹನೀಯರ ತತ್ವದ ಆಧಾರದಲ್ಲಿ ನಾಡನ್ನು ಕಟ್ಟಬೇಕಾಗಿದೆ. ಸಮಾನತೆಯ ಪರ್ವವು ಎಲ್ಲೆಡೆ ಆರಂಭವಾಗಬೇಕಾಗಿದೆ ಎಂದರು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ವಿಶ್ವದ ಅತಿ ಎತ್ತರದ ಗುರು ಬಸವಣ್ಣನವರ ಪ್ರತಿಮೆ ಸ್ಥಾಪಿಸಿ ಮಾದರಿ ಕಾರ್ಯ ಮಾಡಿದ್ದಾರೆ. ಅಮೇರಿಕಾಕ್ಕೆ ಹೋದರೆ 'ಲಿಬರ್ಟಿ ಪ್ರತಿಮೆ' ಜನಾಕರ್ಷಣೀಯವಾಗಿರುವಂತೆ ಕರ್ನಾಟಕ ರಾಜ್ಯಕ್ಕೆ ಬಂದರೆ ಗುರು ಬಸಪಣ್ಣನವರ ಪ್ರತಿಮೆ ಜನಾಕರ್ಷಣೀಯ ಆಗಲಿದೆ ಎಂದು ನುಡಿದರು. ಬಸವ ಮಹಾಮನೆಯಲ್ಲಿ ನಡೆಯುತ್ತಿರುವ ಕಾರ್ಯ ಶ್ಲಾಘನೀಯ ಇಷ್ಟೊಂದು ದೊಡ್ಡ ಕಾರ್ಯಕ್ರಮ ಆಯೋಜನೆ ಮಾಡಿರುವ ಜಗದ್ಗುರು ಮಾತೆ ಮಹಾದೇವಿಯವರನ್ನೇ ಕರ್ನಾಟಕ ಸರಕಾರದ ಪರವಾಗಿ ಅಭಿನಂದಿಸುತ್ತೇವೆ ಎಂದು ನುಡಿದರು.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ, ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಮಹಾಸ್ವಾಮಿಜಿ, ಪೂಜ್ಯ ಶ್ರೀ ನಿಜಗುಣಾನಂದ ಸ್ವಾಮೀಜಿ, ಪೂಜ್ಯ ಶ್ರೀ ವಚನಾನಂದ ಸ್ವಾಮೀಜಿ, ಬೀದರ್ ಜಿಲ್ಲಾ ಉಸ್ತುವಾರಿ ಮಂತ್ರಿ ಶರಣ.ಸುನೀಲ್ ವಲ್ಲಾಪುರೆ, ಸಚಿವ ಶರಣ.ರೇವೂ ನಾಯಕ್ ಬೆಳಮಗಿ, ಆಂಧ್ರ ಪ್ರದೇಶದ ಸಂಸದರಾದ ಶರಣ. ಸುರೇಶ ಶೆಟಗಾರ, ರಾಜ್ಯಸಭಾ ಸದಸ್ಯ ಶರಣ. ಬಸವರಾಜ ಪಾಟೀಲ್ ಸೇಡಂ, ಜೇವರ್ಗಿ ಶಾಸಕ ಶರಣ.ದೊಡ್ಡಪ್ಪಗೌಡ ಪಾಟೀಲ್ ನರಿಬೋಳ್, ಹಾಗೂ ಔರಾದ್ ಶಾಸಕ ಶರಣ. ಪ್ರಭು ಚವ್ಹಾಣ ಇತರರು ಹಾಜರಿದ್ದರು.

ಸಮಾರಂಭದ ಮಧ್ಯೆ ಮಹಾಜಗದ್ಗುರು ಮಾತೆ ಮಹಾದೇವಿಯವರು ಹಾಗೂ ಯುವ ಮುಖಂಡ ಸೂರ್ಯಕಾಂತ ನಾಗಮಾರಪಳ್ಳಿ ಹೆಲಿಕಾಪ್ಟರನಲ್ಲಿ ಕುಳಿತು ಗುರು ಬಸವ ಪ್ರತಿಮೆಗೆ ಪುಷ್ಪವೃಷ್ಟಿಗೈದರು. ಸಾಗರೋಪಾದಿಯಲ್ಲಿ ಸಮಾವೇಶಗೊಂಡಿದ್ದ ಜನಸ್ತೋಮವು ಭರ್ರನೇ ಹೆಲಿಕಾಪ್ಟರ್ ಬರುತ್ತಲೇ ಆಗಸದತ್ತ ಮುಖ ಮಾಡಿದರು. ಪುಷ್ಪವೃಷ್ಟಿಯ ಸಂದರ್ಭದಲ್ಲಿ ಅವರೆಲ್ಲರ ಜಯಜಯಕಾರ ನಭೋ ಮಂಡಲದಲ್ಲಿ ಮಾರ್ದನಿಸಿತು.

ಲಕ್ಷ ಲಕ್ಷ ಜನರು ಅಂದು ಗೋಧಿ ಹುಗ್ಗಿ-ಅನ್ನ ಪ್ರಸಾದವನ್ನು ಸವಿದು ಸಂಭ್ರಮದಲ್ಲಿ ಪಾಲ್ಗೊಂಡರು. ಎಲ್ಲೆಲ್ಲೂ ಶಿಸ್ತು ಸಂಯಮ ಪರಸ್ಪರ ಅಕ್ಕ, ಅಣ್ಣ, ಅವ್ವ, ಎಂದು ಸಂಬೋಧಿಸುತ್ತ ಗುರುವಿನ ಸನ್ನಿಧಿಯಲ್ಲಿ ರಕ್ತ ಸಂಬಂಧಿಗಳಿಗಿಂತಲೂ ಹೆಚ್ಚು ಪ್ರೀತಿ ವಿಶ್ವಾಸಗಳಿಂದ ನಲಿನಲಿದಾಡುತ್ತಿದ್ದ ದೃಶ್ಯವನ್ನು ನೋಡಲು ಕಣ್ಣುಗಳೇ ಸಾಲವು, ವರ್ಣಿಸಲು ಶಬ್ದಗಳಿಲ್ಲ.

ದಾಸೋಹ ಮಂಟಪದಲ್ಲಿ ಶಿಸ್ತಿನಿಂದ ಸೇವೆ ಮಾಡಿದ ರಾಷ್ಟ್ರೀಯ ಬಸವ ದಳದ ಪದಾಧಿಕಾರಿಗಳು ಮತ್ತು ಅಡುಗೆ ಕಾಯಕದ ಮಲ್ಲಪ್ಪನ ಶ್ರಮ ವರ್ಣನಾತೀತವಾದುದು. ಅಂದು ಸಂಜೆ 5-30ರಿಂದ ಪರಮಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯವರು, ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಹಾಗೂ ಎಲ್ಲ ಜಂಗಮ ಮೂರ್ತಿಗಳು ಲಕ್ಷಾಂತರ ಬಸವ ಭಕ್ತರು ಮೇಣದ ಬತ್ತಿಗಳನ್ನು ಹೊತ್ತಿಸಿ ಹಿಡಿದು ಮಂಗಲ ಗೀತೆಯನ್ನು ಹಾಡಿ ಮಹಾನ್ ತ್ಯಾಗಿಗಳಾದ ಗುರು ಬಸವಣ್ಣನವರಿಗೆ ಹುತಾತ್ಮ ಶರಣರಾದ ಹರಳಯ್ಯ ಮಧುವರಸ-ಶೀಲವಂತರಿಗೆ ಕಲ್ಯಾಣ ಕ್ರಾಂತಿಯ ಸಂಸ್ಮರಣೆಗಾಗಿ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ನನಗೆ ಈ ದಿವ್ಯ ದೃಶ್ಯ ನನ್ನ ಜನ್ಮದ ಸ್ಮರಣೀಯ ಘಟನೆಗಳಲ್ಲೊಂದು. ತಿಳಿನೀಲಿ ಬಾನಿನಲ್ಲಿ ವಿಜಯ ಪೌರ್ಣಿಮೆಯ ಪೂರ್ಣ ಚಂದಿರನ ಹಾಲು ಬೆಳದಿಂಗಳಿನ ತಂಪು ತಂಪಾದ ವಾತಾವರಣದಲ್ಲಿ ದೀಪಾವಳಿಯ ಸಂಭ್ರಮಕ್ಕೂ ಮೊದಲೇ ಮೊಂಬತ್ತಿಯ ಸಾಲು ಸಾಲು ದೀಪಗಳಿಂದ ಶೋಭಾಯಮಾನವಾಗಿ ಕಂಗೊಳಿಸುತ್ತಿದ್ದ ತೇಜೋಮೂರ್ತಿ ಗುರು ಬಸವಣ್ಣನವರನ್ನು ಝುಗಮಗಿಸುವ ವಿದ್ಯುತ್ ದೀಪಗಳ ಬೆಳಕಿನಲ್ಲಿ ದರ್ಶನಗೈದಾಗ ಅಬ್ಬಾ ಜನ್ಮ ಸಾರ್ಥಕವಾಯಿತು. ಇಂಥ ಮಧುರ ಗಳಿಗೆಯನ್ನು ನಮ್ಮೆಲ್ಲರ ಬಾಳಿನಲ್ಲಿ ಒದಗಿಸಿದ

ಬಸವಾತ್ಮಜೆ ಮಾತಾಜಿಯವರ ದಿವ್ಯ ಚರಣಾರವಿಂದಗಳಿಗೆ ಎಷ್ಟು ಬಾರಿ ಶರಣೆಂದರೂ ಸಾಲದೆನ್ನಿಸಿತು. ಪುತ್ಥಳಿಯ ಎದುರಿನ ಚೌಕಾಕಾರದ ಕೊಳದಲ್ಲಿ ಪ್ರತಿಬಿಂಬಿಸುತ್ತಿದ್ದ ಪುತ್ಥಳಿಯ ದೃಶ್ಯವಂತೂ ವರ್ಣಿಸಲಸದಳ.

ನಂತರ ವೇದಿಕೆಯಲ್ಲಿ ಶುಭಾರಂಭಗೊಂಡ ಮಹಿಳಾಗೋಷ್ಠಿಯಲ್ಲಿ ಮಹಾಜಗದ್ಗುರು ಮಾತಾಜಿಯವರ ದಿವ್ಯ ಸಾನ್ನಿಧ್ಯದಲ್ಲಿ ಪೂಜ್ಯ ಶ್ರೀ ಮಾತೆ ಜ್ಞಾನೇಶ್ವರಿ, ಧರ್ಮಗುರು ಬಸವಣ್ಣನವರ ಪೂಜೆ ನೆರವೇರಿಸಿದರು. ಬೆಂಗಳೂರಿನ ಖ್ಯಾತ ಹೃದ್ರೋಗ ತಜ್ಞೆ ಡಾ॥ ವಿಜಯಲಕ್ಷ್ಮಿ ಬಾಳೇಕುಂದ್ರಿ ಅವರು ಧ್ವಜಾರೋಹಣ ನೆರವೇರಿಸಿ ಮಾತನಾಡಿ "ಪರಮಪೂಜ್ಯ ಮಾತಾಜಿಯವರ ಸಂಕಲ್ಪ ಶಕ್ತಿಯ ಕ್ರಿಯಾರೂಪವಾಗಿ ವಿಶ್ವದ ಅತಿ ಎತ್ತರದ ಶ್ರೀ ಗುರು ಬಸವಣ್ಣನವರ ಪುತ್ಥಳಿಯು ಈ ದೇಶದ ಅತ್ಯಂತ ಪ್ರಮುಖ ಆಕರ್ಷಣೆಯಾಗಿದೆ. ಪೂಜ್ಯ ಮಾತಾಜಿಯವರು ಕೇವಲ ಒಬ್ಬ ವ್ಯಕ್ತಿಯಲ್ಲ, ಅವರೊಬ್ಬ ಯೋಗಿಣಿ-ಸಾಧಕಿ. ಅವರ ಸನ್ನಿಧಿಯಲ್ಲಿ ಕಲ್ಯಾಣ ನಾಡಿನ ಈ ಪವಿತ್ರ ಪರಿಸರದಲ್ಲಿ ಸಹೋದರ ಸಹೋದರಿಯರಂತೆ ಸಮಾವೇಶಗೊಂಡಿರುವ ನಾವೆಲ್ಲರೂ ಧರ್ಮಗುರು ಬಸವ ತಂದೆಯ ದಿವ್ಯ ಅನುಗ್ರಹದಿಂದ ಪಾವನರಾಗಿದ್ದೇವೆ. ಜೀವನದಲ್ಲಿ ನವೋತ್ಸಾಹವನ್ನು ಹೊಂದಿದ್ದೇವೆ." ಎಂದು ಭಾವ ತುಂಬಿ ನುಡಿದರು.

ರೇಲ್ವೆ ಇಲಾಖೆಯಲ್ಲಿ ಅಭಿಯಂತರರಾಗಿ ಕಾಯಕ ಮಾಡುತ್ತ ಅಧ್ಯಾತ್ಮಿಕ-ಸಾಹಿತ್ಯದ ರಂಗಗಳಲ್ಲೂ ಅಪಾರ ಆಸಕ್ತಿ ಅನುಭವ ಹೊಂದಿರುವ ಶರಣ ಸಚ್ಚಿದಾನಂದ ಚಟನಳ್ಳಿ ಅವರು ಸಂಪಾದಿಸಿದ 'ಅಕ್ಕನ ಸಮಗ್ರ ವಚನಗಳು ಮತ್ತು ಯೋಗಾಂಗ ತ್ರಿವಿಧಿ' ಗ್ರಂಥವನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು. ಮುಖ್ಯ ಅತಿಥಿಗಳಾಗಿ ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಮಂಜುಳಾ ನಾಯ್ಡು ಆಗಮಿಸಿ ಮಾತನಾಡಿ ಮಹಿಳೆಯರ ಆತ್ಮಗೌರವ ಅಧಿಕಗೊಳಿಸಿದ ಧೀಮಂತ ಯೋಗಿಣಿ ಪೂಜ್ಯ ಮಾತಾಜಿಯವರಾಗಿದ್ದಾರೆ ಎಂದು ಪ್ರಶಂಶಿಸಿದರು.

ಕಲಬುರ್ಗಿಯ ಉಪನ್ಯಾಸಕಿ ಡಾ॥ ಇಂದುಮತಿ ಪಾಟೀಲ್, ಬೀದರ್ ಜಿ.ಪಂ. ಮಾಜಿ ಉಪಾಧ್ಯಕ್ಷೆಯರಾದ ಮೀನಾಕ್ಷಿ ಸಂಗ್ರಾಮ್ ಹಾಗೂ ನೀಲಮ್ಮ ಶಿವಾನಂದ ಡಾ॥ ಅನ್ನಪೂರ್ಣ ಹಿರಿಲಿಂಗಣ್ಣನವರ ಬೀದರಿನ ಶಕುಂತಲಾ ಬೆಲ್ದಾಳೆ. ಬಿ.ಬಿ.ಎಂ.ಪಿ ಸದಸ್ಯರಾದ ಯಶೋದಮ್ಮ ಕೃಷ್ಣಪ್ಪ ಹಾಗೂ ಗಂಗಾಂಬಿಕೆ ಮಲ್ಲಿಕಾರ್ಜುನ ಜಿ.ಪಂ.ಸದಸ್ಯೆ ಸಂತೋಷಮ್ಮ ಉಪಸ್ಥಿತರಿದ್ದರು.

ಭದ್ರಾವತಿಯ ಹಿರಿಯ ಶರಣ ಬಿ.ಸಿ.ಮಹಾಲಿಂಗಪ್ಪ ಹಾಗೂ ರತ್ನಮ್ಮ ದಂಪತಿಗಳು ದಾಸೋಹ ಸೇವೆ ವಹಿಸಿಕೊಂಡಿದ್ದರು. ಬೆಂಗಳೂರಿನ ನೇಷನ್ ಬಿಲ್ಡರ್ಸ್ ಸ್ಕೂಲ್ ಪ್ರಾಂಶುಪಾಲರಾದ ಶರಣೆ. ವಿಜಯಲಕ್ಷ್ಮಿ ಭುಜೇಂದ್ರ ಸ್ವಾಗತಿಸಿದರು. ಬೀದರ್ ರೋಟರಿ ಅಧ್ಯಕ್ಷೆ ಶರಣೆ. ಮಂಗಳಾ ಭಾಗವತ್ ಸಭಾ ನಿರ್ವಹಣೆ ಮಾಡಿದರು.

ಚನ್ನೈ ಭರತ ನಾಟ್ಯ ಸಂಸ್ಥೆಯ ಕುಮಾರಿ ಲಂಕಾ ಸಂತೋಷಿ ಅವರು 'ಶಿವತಾಂಡವ ನೃತ್ಯ ಪ್ರದರ್ಶಿಸಿ ಎಲ್ಲರ ಮನಸೂರೆಗೊಂಡರು. ಬೆಳಗಾವಿ ರಾಷ್ಟ್ರೀಯ ಬಸವ ದಳದ 60ಕ್ಕೂ ಹೆಚ್ಚು ಪದಾಧಿಕಾರಿಗಳು ಅಭಿನಯಿಸಿದ ಬಸವ ಧರ್ಮದ ಉದಯ ಹಾಗೂ ಪುನರುತ್ಥಾನ" ರೂಪಕವಂತೂ ಕಲ್ಯಾಣ ಪರ್ವಕ್ಕೆ ವಿಶೇಷ ಮೆರುಗು ತಂದು ಕೊಟ್ಟಿತು.

ಧರ್ಮಪಿತ ಬಸವಣ್ಣನವರ ಜನನದಿಂದ ಉಳವಿಯ ಮಹಾಮನೆಯಲ್ಲಿ ವಚನ ವಾಙ್ಮಯವನ್ನು ಸಂರಕ್ಷಿಸುವ ಘಟನಾವಳಿಗಳು ಹಾಗೂ ಬಸವೋತ್ತರ ಕಾಲದಲ್ಲಿ ಜರುಗಿದ ಲಿಂಗಾಯತ ಧರ್ಮದ ಪುನರುತ್ಥಾನ ಮತ್ತು ಫ.ಗು.ಹಳಕಟ್ಟಿ ಅವರಿಂದ ವಚನ ಸಾಹಿತ್ಯದ ಸಂಶೋಧನೆ, 1924ರಲ್ಲಿ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮಾ ಗಾಂಧಿಯವರಿಗೆ ಹರ್ಡೇಕರ ಮಂಜಪ್ಪನವರು ಬಸವಣ್ಣನವರ ಬಗೆಗೆ ಮನವರಿಕೆ ಮಾಡಿಕೊಟ್ಟ ಪ್ರಸಂಗ, ಮಹಾಜಗದ್ಗುರು

ಲಿಂಗಾನಂದ ಸ್ವಾಮೀಜಿಯವರ ಆಗಮನ, ಪೂಜ್ಯ ಮಾತಾಜಿಯವರ ಸಾಧನೆ ಗುರು ಬಸವ ಪುತ್ಥಳಿ ಅನಾವರಣದವರೆಗಿನ ಘಟನಾವಳಿಗಳಂತೂ ನೆರೆದಿದ್ದ ಲಕ್ಷಾಂತರ ಬಸವ ಭಕ್ತರಿಂದ ಶಹಾಬ್ಬಾಶ್ ಎನ್ನಿಸಿಕೊಂಡವು. ಹಿರಿಯ ಶರಣ ಕೆ.ಬಸವರಾಜಪ್ಪನವರ ಮೃದು ಹೃದಯದ ಮಾತುಗಳ ಮಾರ್ಗದರ್ಶನ, ನೂರಾರು ಯುವ ಉತ್ಸಾಹಿ ಕಾಯಕಶೀಲ ಶರಣ ಶರಣೆಯರ ಬಳಗದ ಈ ರೂಪಕದಿಂದ ಎಲ್ಲರಿಂದಲೂ ಸೈ ಎನ್ನಿಸಿಕೊಂಡರು. ರಾತ್ರಿ 12 ಗಂಟೆ ಮೀರಿದರೂ ಶರಣರ ಉತ್ಸಾಹ ಕುಂದಿರದೆ ಸ್ತಬ್ಧವಾಗಿ ಕುಳಿತಿದ್ದರು. ರೂಪಕವು ಎಲ್ಲರನ್ನೂ ಮಂತ್ರಮುಗ್ಧಗೊಳಿಸಿತ್ತು. ಬೆಳಗಿನಷ್ಟೇ ರಾತ್ರಿ ಕೂಡ ಬೃಹತ್ ಪೆಂಡಾಲ್ ತುಂಬಿ ತುಳುಕುತ್ತಿತ್ತು.

ದಿ. 29ರಂದು ಬೆಳಿಗ್ಗೆ 10-30ರಿಂದ ಸಮಾಜ ಪರಿವರ್ತನಾ ಗೋಷ್ಠಿ. ದಿ.28ರಂದು ಬೆಳಗಿನ ಜಾವ ಶರಣವಂದನೆ ಮಾಡಿ ಆದಿ ಶರಣರಿಗೆ ಶರಣಾರ್ಥಿ ಸಲ್ಲಿಸಲಾಗಿತ್ತು. ದಿ. 29ರಂದು ಬೆಳಗಿನ ಜಾವ ಸಾಮೂಹಿಕ ಇಷ್ಟಲಿಂಗ ಪೂಜೆ ನೆರವೇರಿತು. ಗೋಷ್ಠಿಯನ್ನು ಬಾಮ್‌ಸೆಫ್ (ಭಾರತದ ಮೂಲನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ)ದ ಅಧ್ಯಕ್ಷರಾದ ಶ್ರೀ ವಾಮನ್ ಮೇಶ್ರಾಂ ಉದ್ಘಾಟಿಸಿದರು. ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವಾಮನ್ ಮೇಶ್ರಾಂ ಅವರು ಭಾರತದ ಮೂಲ ನಿವಾಸಿಗಳ ಮೇಲೆ ಹೇಗೆ ಆಕ್ರಮಣವಾಯಿತು. ಆರ್ಯರು ಹೇಗೆ ವ್ಯವಸ್ಥಿತವಾಗಿ ವರ್ಣಾಶ್ರಮ ಧರ್ಮವನ್ನು ಮೂಲ ನಿವಾಸಿಗಳ ಧರ್ಮದ ಮೇಲೆ ಹೇರಿದರು ಎಂಬುದನ್ನು ಎಳೆಎಳೆಯಾಗಿ ಬಿಡಿಸಿ ಹೇಳಿದರು. ಲಿಂಗಾಯತ ಧರ್ಮ ಹಿಂದುದೊಳಗಣ ಒಂದು ಜಾತಿಯಲ್ಲ ಒಂದು ಸ್ವತಂತ್ರ ಹಾಗೂ ಪರಿಪೂರ್ಣ ಧರ್ಮ ಎಂದು ಮನಮುಟ್ಟುವಂತೆ ವಿವರಿಸಿದರು.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ನೇತೃತ್ವದಲ್ಲಿ ಜಂಗಮ ಮೂರ್ತಿಗಳು ಪರುಷಕಟ್ಟೆಗೆ ಹೋಗಿ ಜ್ಯೋತಿಯನ್ನು ಹಚ್ಚಿಕೊಂಡು ಬಂದ ನಂತರ ಸಂಜೆ 5 ಗಂಟೆಯಿಂದ ಪೀಠಾರೋಹಣ ಪ್ರಕ್ರಿಯೆ ಆರಂಭವಾಯಿತು. ಮೊದಲಿಗೆ ಬಸವ ಧರ್ಮದ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರನ್ನು ಪೀಠದ ಮೇಲೆ ಆರೋಹಣ ಮಾಡಿಸಿ, ಪಾದಪೂಜೆ ಮಾಡಲಾಯಿತು. ನಂತರ ಅಲ್ಲಮಪ್ರಭು ಶೂನ್ಯ ಪೀಠದ ಪೀಠಾಧೀಶರಾದ ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳು ಪೀಠಾರೋಹಣ ಮಾಡಿದರು. ಪೂಜ್ಯ ಗಂಗಾ ಮಾತಾಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಸಂಖ್ಯಾತ ಶರಣ ಶರಣೆಯರು ಮಾಲಾರ್ಪಣೆ ಮಾಡುವ ಮೂಲಕ ಪೂಜ್ಯ ಶ್ರೀಗಳಿಗೆ ಗೌರವಾರ್ಪಣೆ ಮಾಡಿ, ಜಯಘೋಷ ಮಾಡಿದರು. ಪೂಜ್ಯ ಶ್ರೀಗಳು ಆಶೀರ್ವಚನ ನೀಡಿದರು.

–ವರದಿ. ಕರಬಸಪ್ಪ. ಕೋರಿಶೆಟ್ಟರು, ಧಾರವಾಡ

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ
2013 ರ ಜನವರಿ 11, 12, 13, 14, 15ರಂದು ನಡೆಯಲಿರುವ
ಇಪ್ಪತ್ತಾರನೆಯ ಶರಣಮೇಳದ ಅಂಗವಾಗಿ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ
ಪ್ರಚಾರ ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು.

ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2013ನೆಯ ಇಸವಿಯ ದಿ.11ರಿಂದ 15ರವರೆಗೆ ನಡೆಯುವ 26ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾ ಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಂಧ್ಯಾ ಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮಗಳನ್ನು ಏರ್ಪಡಿಸಲೂಬಹುದು. 2012 ನೆಯ ಇಸವಿಯ 26ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸು ವಿರಾಗಿ ನಂಬಿದ್ದೇವೆ.

ವಾಸ್ತವ್ಯ : ಬೆಂಗಳೂರು
14-11-2012

ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.

ಕ್ರ.ಸಂ.	ದಿನಾಂಕ	ವಾರ	ಊರಿನ ಹೆಸರು
12.	12-11-2012	ಶಿವ(ಸೋಮ)ವಾರ	ಶಿವಮೊಗ್ಗ
13.	13-11-2012	ಬಸವ(ಮಂಗಳ)ವಾರ	ಕೊಮ್ಮನಾಳ
14.	14-11-2012	ಚನ್ನ (ಬುಧ)ವಾರ	ದಾವಣಗೆರೆ
15.	15-11-2012	ಪ್ರಭು(ಗುರು)ವಾರ	ಚಿತ್ರದುರ್ಗ
16.	16-11-2012	ಮಾತೃ (ಶುಕ್ರ)ವಾರ	ಚಳ್ಳಕೆರೆ
17.	17-11-2012	ಶರಣ (ಶನಿ)ವಾರ	ದೊಡ್ಡ ಉಳ್ಳಾರ್ತಿ
18.	18-11-2012	ದೇವ (ಭಾನು)ವಾರ	ಚಿತ್ರನಾಯಕನ ಹಳ್ಳಿ

19.	19-11-2012	ಶಿವ (ಸೋಮ)ವಾರ	ಘಟಪರ್ತಿ
20.	20-11-2012	ಬಸವ (ಮಂಗಳ)ವಾರ	ಕೋಡಲ್
21.	21-11-2012	ಚನ್ನ (ಬುಧ)ವಾರ	ಬಳ್ಳಾರಿ
22.	22-11-2012	ಪ್ರಭು(ಗುರು)ವಾರ	ಬಳ್ಳಾರಿ
23.	23-11-2012	ಮಾತೃ(ಶುಕ್ರ)ವಾರ	ಶಿರುಗುಪ್ಪ
24.	24-11-2012	ಶರಣ(ಶನಿ)ವಾರ	ಅಸ್ಕಿಹಾಳ
25.	25-11-2012	ದೇವ(ಭಾನು)ವಾರ	ಗಂಗಾವತಿ
26.	26-11-2012	ಶಿವ (ಸೋಮ)ವಾರ	ಕೊಪ್ಪಳ
27.	27-11-2012	ಬಸವ (ಮಂಗಳ)ವಾರ	ಕೊಪ್ಪಳ
28.	28-11-2012	ಚನ್ನ (ಬುಧ)ವಾರ	ಕೊಪ್ಪಳ
29.	29-11-2012	ಪ್ರಭು(ಗುರು)ವಾರ	ಕೊಪ್ಪಳ
30.	30-11-2012	ಮಾತೃ(ಶುಕ್ರ)ವಾರ	ಹುಬ್ಬಳ್ಳಿ
31.	1-12-2012	ಶರಣ (ಶನಿ)ವಾರ	ಧಾರವಾಡ
32.	2-12-2012	ದೇವ(ಭಾನು)ವಾರ	ಮುಮ್ಮಿಗಟ್ಟಿ
33.	3-12-2012	ಶಿವ (ಸೋಮ)ವಾರ	ಅವರಾದಿ
34.	4-12-2012	ಬಸವ(ಮಂಗಳ)ವಾರ	ಅವರಾದಿ
35.	5-12-2012	ಚನ್ನ(ಬುಧ)ವಾರ	ಅವರಾದಿ
36.	6-12-2012	ಪ್ರಭು (ಗುರು)ವಾರ	ಸವದತ್ತಿ
37.	7-12-2012	ಮಾತೃ (ಶುಕ್ರ)ವಾರ	ಬೈಲಹೊಂಗಲ
38.	8-12-2012	ಶರಣ(ಶನಿ)ವಾರ	ಬೈಲಹೊಂಗಲ
39.	9-12-2012	ದೇವ(ರವಿ)ವಾರ	ಬೆಳಗಾವಿ
40.	10-12-2012	ಶಿವ(ಸೋಮ)ವಾರ	ಬೆಳಗಾವಿ
41.	11-12-2012	ಬಸವ (ಮಂಗಳ)ವಾರ	ಸಂಕೇಶ್ವರ
42.	12-12-2012	ಚನ್ನ (ಬುಧ)ವಾರ	ಗಡಿಹಿಂಗ್ಲಾಜ್
43.	13-12-2012	ಪ್ರಭು(ಗುರು)ವಾರ	ಗೋಕಾಕ್
44.	14-12-2012	ಮಾತೃ (ಶುಕ್ರ)ವಾರ	ಗೋಕಾಕ್
45.	15-12-2012	ಶರಣ (ಶನಿ)ವಾರ	ಗೋಕಾಕ್
46.	16-12-2012	ದೇವ(ಭಾನು)ವಾರ	ಗೋಕಾಕ್
47.	17-12-2012	ಶಿವ (ಸೋಮ)ವಾರ	ಶೇಗುಣಸಿ
48.	18-12-2012	ಬಸವ (ಮಂಗಳ)ವಾರ	ಖಿವಟಕೊಪ್ಪ
49.	19-12-2012	ಚನ್ನ (ಬುಧ)ವಾರ	ತಾಂವಶಿ
50.	20-12-2012	ಪ್ರಭು(ಗುರು)ವಾರ	ಅಥಣಿ
51.	21-12-2012	ಮಾತೃ(ಶುಕ್ರ)ವಾರ	ಕನಮಡಿ
52.	22-12-2012	ಶರಣ(ಶನಿ)ವಾರ	ಕನಮಡಿ
53.	23-12-2012	ದೇವ (ಭಾನು)ವಾರ	ಚಡಚಣ
54.	24-12-2012	ಶಿವ (ಸೋಮ)ವಾರ	ಬಿಜಾಪುರ
55.	25-12-2012	ಬಸವ (ಮಂಗಳ)ವಾರ	ಗುಲಬರ್ಗಾ (ಬ.ಮಂಟಪ ನೃಪತುಂಗ ಕಾಲನಿ ಸಂಜೆ-6)

56.	26-12-2012	ಚನ್ನ(ಬುಧ)ವಾರ	ಗುಲಬರ್ಗಾ(ಬ.ಮಂಟಪ ಮಹಾಂತನಗರ)
57.	27-12-2012	ಪ್ರಭು(ಗುರು)ವಾರ	ಯಲಮಾಮಿಡಿ
58.	28-12-2012	ಮಾತೃ (ಶುಕ್ರ)ವಾರ	ಉದಗೀರ
59.	29-12-2012	ಶರಣ(ಶನಿ)ವಾರ	ಬೀದರ
60.	30-12-2012	ದೇವ (ಭಾನು)ವಾರ	ಕೋಳಾರ (ಕೆ)
61.	31-12-2012	ಶಿವ (ಸೋಮ)ವಾರ	ಜಹಿರಾಬಾದ್
62.	1-01-2013	ಬಸವ(ಮಂಗಳ)ವಾರ	ಹೈದ್ರಾಬಾದ್
63.	2-01-2013	ಚನ್ನ (ಬುಧ)ವಾರ	ಹೈದ್ರಾಬಾದ್
64.	3-01-2013	ಪ್ರಭು(ಗುರು)ವಾರ	ಹೈದ್ರಾಬಾದ್
65.	4-01-2013	ಮಾತೃ(ಶುಕ್ರ)ವಾರ	ಹೈದ್ರಾಬಾದ್
66.	5-01-2013	ಶರಣ (ಶನಿ)ವಾರ	ಹೈದ್ರಾಬಾದ್
67.	6-01-2013	ದೇವ (ಭಾನು)ವಾರ	ಹೈದ್ರಾಬಾದ್
70.	7-01-2013	ಶಿವ (ಸೋಮ)ವಾರ	ಹೈದ್ರಾಬಾದ್
71.	8-01-2013	ಬಸವ (ಮಂಗಳ)ವಾರ	ಹೈದ್ರಾಬಾದ್
72.	9-01-2013	ಚನ್ನ (ಬುಧ)ವಾರ	ಹೈದ್ರಾಬಾದ್
73.	10-01-2013	ಪ್ರಭು(ಗುರು)ವಾರ	ಕೂಡಲ ಸಂಗಮಕ್ಕೆ ಪ್ರಯಾಣ

೧೧ ನೆಯ ಕಲ್ಯಾಣ ಪರ್ವ

ಪೂಜ್ಯ ಶ್ರೀ ಮ.ನಿ.ಪ್ರ ಮಹಾಜಗದ್ಗುರು ಮಾತಾಜಿ ಅವರಿಗೆ ಶರಣಾರ್ಥಿ.

ಪೂಜ್ಯರೇ, ಅತ್ಯಂತ ಸಮರ್ಥ ಹಾಗೂ ಸ್ವಾಭಿಮಾನದಿಂದ ಕೈಕೊಂಡ ಅಪ್ಪ ಬಸವಣ್ಣನವರ ಪುತ್ಥಳಿಯ ಅನಾವರಣವು ಲಿಂಗವಂತ ಧರ್ಮೀಯರಲ್ಲಿ ಸುಪ್ತವಾಗಿರುವ ಅಭಿಮಾನವನ್ನು ಬಡಿದೆಬ್ಬಿಸಿ ಹೆಮ್ಮೆಯಿಂದ ತಾವು ಲಿಂಗವಂತರು ಎಂದು ಹೇಳಿಕೊಂಡು ಎದೆಯುಬ್ಬಿಸಿ ಓಡಾಡುವಂತೆ ಕ್ರಿಯಾಚರಣೆ ಗೈದ ತಮ್ಮಗಳ ಸಾಧನೆ ನಿಜಕ್ಕೂ ಐತಿಹಾಸಿಕ ದಾಖಲೆಯಾಗಿದೆ.

ಅಂದು ಹರಿದುಬಂದ ಜನಸಾಗರಕ್ಕಿಂತಲೂ ಇಂದು ಅದರ ಬಗ್ಗೆ ಅಭಿಮಾನ ಮತ್ತು ಕಳಕಳಿ ವ್ಯಕ್ತಪಡಿಸುವ ಜನಸಮುದಾಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದು ನಮಗೆಲ್ಲಾ ಸಂತೋಷ ತಂದಿದೆ. ಅಪ್ಪಟ ಬಸವಣ್ಣನವರ ಮಗಳಾಗಿ ನಮ್ಮೆಲ್ಲರ ಮಾತೆಯಾಗಿ ಪಡೆದ ನಾವೇ ಧನ್ಯರೆಂದು ಸಂತೋಷದಿಂದ ಉಬ್ಬಿ ಹಿಗ್ಗುತ್ತಿದ್ದೇವೆ. ತುಂಬಾ ಶಿಸ್ತಿನಿಂದ ಅರ್ಥಪೂರ್ಣ ಬೌದ್ಧಿಕ ಮತ್ತು ಅಧ್ಯಾತ್ಮಿಕ ಚಟುವಟಿಕೆಗಳಿಂದ ಕೂಡಿದ ಮೂರು ದಿವಸದ ಕಾರ್ಯಕ್ರಮಗಳೆಲ್ಲಾ ಮನೆಮಾತಾಗಿ ಜನಮನ ಸೂರೆಗೊಂಡಿರುವುದು ನಿಜಕ್ಕೂ ಪವಾಡವೇ ಸರಿ. ಅಪ್ಪ ಬಸವಣ್ಣನವರ ಕಾಲದಲ್ಲಿ ಕೈಗೂಡದ ಸ್ತ್ರೀಗುರುತ್ವದೊಂದಿಗೆ ಅನೇಕ ಹೊಸ ವಿಚಾರಗಳನ್ನು ತಮ್ಮಿಂದ ಅನುಭವಿಸುತ್ತಿರುವುದು ನಮಗೆಲ್ಲಾ ಹೆಮ್ಮೆಯಾಗಿದೆ. ಇಷ್ಟೆಲ್ಲಾ ಕೆಲಸ ಕಾರ್ಯ ಮಾಡಿರುವ ತಾವು ದಯವಿಟ್ಟು ಅವುಗಳ ನಿರ್ವಹಣೆಯ ಸಮಿತಿ ಮತ್ತು ಜವಾಬ್ದಾರಿ ತಂಡಗಳನ್ನು ಮಾಡಿ ಶಾಶ್ವತವಾದ ಪರಂಪರೆಯ ಬುನಾದಿ ಹಾಕುವ ಆವಶ್ಯಕತೆ ಇದೆ. ಅದಕ್ಕಾಗಿ ಅತ್ತ ಕಡೆ ತಾವುಗಳು ಗಮನ ಹರಿಸಬೇಕೆಂದು ಪ್ರಾರ್ಥಿಸುತ್ತೇವೆ. ಶರಣಾರ್ಥಿ.

ಶರಣೆ. ಸುನಂದವ್ವ ಜಗನ್ನಾಥಪ್ಪ ಪನಸಾಳೆ ಜನವಾಡಾ
ಅಧ್ಯಕ್ಷರು, ಮಹಾಜಗದ್ಗುರು ಬಸವಣ್ಣ ಧರ್ಮಾರ್ಥ ದತ್ತಿ (ರಿ)
ನಂ.2-2-10/ಎ4, ಶಿವಶಕ್ತಿ ನಿಲಯ, ಮಾಂಡವಿ ಟವರ್ ಹತ್ತಿರ
ಸಿರಿಬಿಡು, ಮೂಡನಿಡಂಬೂರು, ಉಡುಪಿ-576101

ರಾಷ್ಟ್ರೀಯ ಬಸವ ದಳದ ಮಹತ್ವ

ಧಾರವಾಡದಲ್ಲಿದ್ದೆ, ಸಂಜೆಯ ವೇಳೆ. ಒಂದು ಫೋನ್ ಬಂದಿತು. ಅರ್ಧ ಹಿಂದಿ ಅರ್ಧ ತೆಲುಗಿನಲ್ಲಿ ಮಾತನಾಡುತ್ತಿದ್ದಾರೆ. ವಾಹನಗಳ ಓಡಾಟದ ಸದ್ದು ಸಹ ಕೇಳುತ್ತಿದೆ. ಏನೂ ಅರ್ಥವಾಗುತ್ತಿಲ್ಲ. ಅರ್ಧಂಬರ್ಧ ತಿಳಿದ ಸಂಗತಿ ಎಂದರೆ ಕರ್ನಾಟಕ ರಿಜಿಸ್ಟ್ರೇಷನ್ ಗಾಡಿ, ಅಪಘಾತವಾಗಿದೆ. ಇಬ್ಬರು ಹೆಣ್ಣುಮಕ್ಕಳಿಗೆ ಇಬ್ಬರು ಗಂಡಸರಿಗೆ ತುಂಬಾ ಪೆಟ್ಟಾಗಿದೆ. ರಾಷ್ಟ್ರೀಯ ಹೆದ್ದಾರಿ 9 ರಲ್ಲಿ ಸದಾಶಿವಪೇಟೆ ಎಂಬಲ್ಲಿ. ತಕ್ಷಣ ನಮ್ಮ ಗಾಡಿಗಳು ಸಂಚರಿಸುವ ಬಗ್ಗೆ ಮಾಹಿತಿ ಪಡೆದೆ. ಬಸವ ಪ್ರಭು ಸ್ವಾಮಿಗಳು, ಪ್ರಭುಲಿಂಗ ಸ್ವಾಮಿಗಳು ಆಂಧ್ರದಲ್ಲಿ ಸಂಚರಿಸುವ ಸಂಭವವಿದ್ದಿತು. ಅವರೆಲ್ಲ ಬಸವ ಕಲ್ಯಾಣದಲ್ಲಿ ಇದ್ದರು. ಜಹೀರಾಬಾದಿನ ಶರಣ. ಶಂಕರೆಪ್ಪ ಪಾಟೀಲ್‌ರಿಗೆ ಫೋನ್ ಮಾಡಿ, "ಸದಾಶಿವ ಪೇಟೆ ಬಳಿ ಅಪಘಾತವಾಗಿದೆ. ಯಾರೇ ಇರಲಿ, ಹೋಗಿ ಬನ್ನಿರಿ." ಎಂದು ಹೇಳಿದೆ. "ಸದಾಶಿವ ಪೇಟೆಯಲ್ಲಿ ರಾಷ್ಟ್ರೀಯ ಬಸವ ದಳ ಇದೆ. ಅಧ್ಯಕ್ಷರಿಗೆ, ಪದಾಧಿಕಾರಿಗಳಿಗೆ ಫೋನ್ ಮಾಡುತ್ತೇನೆ" ಎಂದರು. ಫೋನ್ ಮಾಡಿದರು. ತ್ವರಿತಗತಿಯಲ್ಲಿ ನೆರವು ನೀಡಿದರು. ಅಲ್ಲೇ ಹೆದ್ದಾರಿಯ ಮೇಲಿದ್ದ ಬಾಲಾಜಿ ನರ್ಸಿಂಗ್ ಹೋಮ್‌ಗೆ ಅಂಬುಲೆನ್ಸ್ ತರಿಸಿ ಸೇರಿಸಿದರು. ಹೆಣ್ಣು ಮಕ್ಕಳಿಗೂ ಪ್ರಜ್ಞೆ ತಪ್ಪಿತ್ತು. ಅವರಾರೂ ಬೇರೆ ಅಲ್ಲ ಶರಣ ಸಿದ್ಧರಾಮಪ್ಪ ಪಾಟೀಲ್ ಮತ್ತು ಪುಷ್ಪಾ ದಂಪತಿಗಳು. ಬೆಂಗಳೂರಿಂದ ಬೀದರಿಗೆ ಕಾರಿನಲ್ಲಿ ಹೋಗುತ್ತಿದ್ದರು. ಪುಷ್ಪಾ ಅವರ ತಮ್ಮ ಬಾಬು ಕಾರು ನಡೆಸುತ್ತಿದ್ದರು.

ಅತ್ಯಂತ ಆಕಸ್ಮಿಕವಾಗಿ ಶರಣ. ಸಿದ್ಧರಾಮಪ್ಪ ಪಾಟೀಲ್ ಅಂದು ಬೆಳಿಗ್ಗೆ ನನಗೆ ಫೋನ್ ಮಾಡಿ ಬೀದರಿಗೆ ಹೋಗುತ್ತಿರುವುದಾಗಿಯೂ, ನಮ್ಮ ಒಂದು ಕೆಲಸವನ್ನು ಬಂದ ನಂತರ ಮಾಡಿಕೊಡುವುದಾಗಿಯೂ ಹೇಳಿದ್ದರು. ನಂತರ ಅವರ ಆಪ್ತಮಿತ್ರ ಹೈದ್ರಾಬಾದಿನ ಸುರೇಶ್ ಕೋರೆಯವರಿಗೆ ಫೋನ್ ಮಾಡಿದ್ದಾರೆ. ಅಪಘಾತವಾದ ತಕ್ಷಣ ದಾರಿಹೋಕರು ಅವರ ಮೊಬೈಲ್‌ನಲ್ಲಿದ್ದ ನನ್ನ ನಂಬರ ನೋಡಿ ಫೋನ್ ಮಾಡಿದ್ದರು. ನಂತರ ಸುರೇಶ್ ಕೋರೆ ಅವರಿಗೂ ಮಾಡಿದ್ದಾರೆ. ಅವರು ಹೈದರಾಬಾದಿನಿಂದ ಬರುವಷ್ಟರಲ್ಲಿ ಗಾಯಾಳುಗಳಿಗೆ ಆಸ್ಪತ್ರೆ ಸೌಲಭ್ಯ ಸಿಕ್ಕಿತ್ತು. ಅವರಿಗೆಲ್ಲ ಆಪರೇಷನ್‌ಗಳಾಗಿವೆ. ಯಾರಿಗೂ ಜೀವಕ್ಕೆ ಅಪಾಯವಾಗಿಲ್ಲ. ಸಿದ್ಧರಾಮಪ್ಪನವರ ಬಲ ತೊಡೆಯ ಮೂಳೆ ಮುರಿದಿತ್ತು. ಕಾರು ಜಜ್ಜಿ ಹೋಗಿರುವ ಸ್ಥಿತಿ ನೋಡಿದರೆ ಅದರಲ್ಲಿದ್ದ ಯಾರೂ ಉಳಿದಿರಲು ಸಾಧ್ಯವಿಲ್ಲ ಎಂಬಂತಿತ್ತು.

ಇಂದು (11-11-2012)ಬಂದು ದಂಪತಿಗಳು ಭೇಟಿಯಾದರು. ಅವರ ಸಂತೋಷ ಹೇಳಲಾರದಷ್ಟು. ರಾಷ್ಟ್ರೀಯ ಬಸವ ದಳದ ನೆಟ್‌ವರ್ಕ್ ಆಂಧ್ರದ ಸದಾಶಿವಪೇಟೆಯಲ್ಲಿ ಇದ್ದುದರಿಂದ ಜಹೀರಾಬಾದಿನ ಶಂಕರಪ್ಪ ತಕ್ಷಣ ಸಂಪರ್ಕಿಸಲು ಸಾಧ್ಯವಾಯಿತು. ಬಹಳ ಬೇಗನೆ ನೆರವು ಒದಗಿತು. ಮದುವೆಗೆ ಹೊರಟ ಅವರ ಬಳಿ ಸಾಕಷ್ಟು ಬಂಗಾರ, ಹಣ, ಬೆಲೆ ಬಾಳುವ ಮೊಬೈಲ್ ಇದ್ದರೂ, ಗಾಯಾಳುಗಳು ಕೆಲವರು ನಿಸ್ಸಹಾಯಕರಾಗಿ ಕೆಲವರು ಪ್ರಜ್ಞೆ ತಪ್ಪಿದ್ದರೂ ಏನೊಂದೂ ಕಳುವಾಗಿರಲಿಲ್ಲ. ದಾರಿ ಹೋಕರು ಕಳುವು ಮಾಡದಿರುವುದನ್ನು, ಸಿದ್ಧರಾಮಪ್ಪನವರ ಮೊಬೈಲ್‌ನಲ್ಲಿ ನೋಡಿ ನನ್ನ ಮತ್ತು ಸುರೇಶ್ ಕೋರೆಗೆ ಫೋನ್ ಮಾಡಿದ್ದನ್ನು ಮೆಚ್ಚಿಕೊಳ್ಳಬೇಕು.

ಶರಣ ಸಿದ್ಧರಾಮಪ್ಪನವರಿಗೆ ರಾಷ್ಟ್ರೀಯ ಬಸವ ದಳದ ಬಗ್ಗೆ ಹೆಚ್ಚಿನ ಅಭಿಮಾನ ಹುಟ್ಟಿದೆ. ಸಹಕರಿಸಿದ ಸರ್ವರಿಗೂ ಶರಣು ಶರಣಾರ್ಥಿಗಳು. ಶರಣ ಬಂಧುಗಳೇ ರಾಷ್ಟ್ರೀಯ ಬಸವ ದಳದ ಶಾಖೆಗಳನ್ನು ಹೆಚ್ಚು ಹೆಚ್ಚು ತೆರೆಯಿರಿ.

-ಮಾತಾಜಿ

ಬೈಲಹೊಂಗಲದ ರಾ.ಬ.ದಳದಿಂದ ಅಭಿನಂದನಾರ್ಹ ಕೆಲಸ

ಉಳವಿಯ ಮಹಾಮನೆ ಗವಿ ನಮಗೆ ಭಾವನಾತ್ಮಕವಾಗಿ ಸಂಬಂಧಿಸಿದೆ. ಕಲ್ಯಾಣ ಕ್ರಾಂತಿಯ ನಂತರ ಜ್ಞಾನದಾಸೋಹ-ಅನ್ನದಾಸೋಹ ಮತ್ತೊಮ್ಮೆ ನಡೆದುದು ಇಲ್ಲಿಯೇ ! ಇದನ್ನು ಸ್ವಚ್ಛಗೊಳಿಸುವ ಕಾರ್ಯವನ್ನು ನಾವು ಆರಂಭಿಸಿದೆವಾದರೂ ಮುಂದುವರಿಸಲು ಆಗಲಿಲ್ಲ. ಆದರೆ ಬೈಲಹೊಂಗಲದ ಬಸವ ದಳದವರು ಕಿತ್ತೂರು, ಸವದತ್ತಿ, ಅಸುಂಡಿ, ಬೆಳಗಾಂ ಬಸವ ದಳದವರ ಸಹಕಾರದೊಡನೆ ಮಹಾಮನೆ ಗವಿಯನ್ನು ಸ್ವಚ್ಛಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ವೀಡಿಯೋ ಸಿಡಿ ಮಾಡಿ ತೋರಿಸಿದರು. ಸುಮಾರು 60 ಜನ ಕಾರ್ಯಕರ್ತರು ವರ್ಷ ಇಷ್ಟಿಷ್ಟು ಸ್ವಚ್ಛ ಮಾಡುತ್ತಾ ಹೋಗಿದ್ದಾರೆ. ತಂಡದ ನೇತೃತ್ವ ವಹಿಸಿದ ಬೈಲಹೊಂಗಲದ ಸುಧೀರ್ ವಾಲಿ ಮತ್ತು ಕಿತ್ತೂರಿನ ಗಂಗಾಧರ ಕಟ್ಟಿ- ಇವರನ್ನು ಅಭಿನಂದಿಸೋಣ.

ಶರಣ ಮೇಳದ ಯಶಸ್ಸಿಗೆ ಕರೆ

11ನೇ ಕಲ್ಯಾಣ ಪರ್ವದ ಯಶಸ್ಸಿನ ಹಿಗ್ಗಿನ ಹೊಳೆಯಲ್ಲಿ ತೇಲುತ್ತಿರುವ ಶರಣ ಬಂಧುಗಳು ತಕ್ಷಣವೇ 26ನೆಯ ಶರಣ ಮೇಳಕ್ಕೆ ಅಣಿಯಾಗಬೇಕಾಗಿದೆ. ಶರಣ ಮೇಳ-ಕಲ್ಯಾಣ ಪರ್ವ ಇವೆರಡೂ ಪರಸ್ಪರ ಪೂರಕ. ಅದರ ಪ್ರಭಾವ ಇದರ ಮೇಲೆ, ಇದರ ಪ್ರಭಾವ ಅದರ ಮೇಲೆ. ಕಲ್ಯಾಣ ಪರ್ವವಂತೂ ಅದ್ಭುತ ಯಶಸ್ಸು ಸಾಧಿಸಿತು. ಗುರು ಬಸವಣ್ಣನ ಕಲ್ಯಾಣಕ್ಕೆ ಜನ ಸಾಗರವೇ ಹರಿದು ಬಂದಿತು. ಇದರ ಪ್ರಭಾವ ಶರಣ ಮೇಳದ ಮೇಲೆ ಆಗಿ 26ನೆಯ ಶರಣ ಮೇಳಕ್ಕೆ ಹಿಂದಿನ ಎಲ್ಲ ಶರಣ ಮೇಳಕ್ಕಿಂತಲೂ ಹೆಚ್ಚಿನ ಜನರು ಬರುವ ಸಂಭವವಿದೆ. ವರ್ಷದಿಂದ ವರ್ಷಕ್ಕೆ ಪಾಲ್ಗೊಳ್ಳುವವರ ಸಂಖ್ಯೆ ಬೆಳೆಯುತ್ತಿರುವುದು ಸರ್ವವಿದಿತವಷ್ಟೆ. 11ನೆಯ ಕಲ್ಯಾಣ ಪರ್ವದಲ್ಲಿ ನಿರೀಕ್ಷೆಗೂ ಮೀರಿ ಜನ ಸಾಗರದೋಪಾದಿಯಲ್ಲಿ ದಿ. 28ರಂದು ಹರಿದು ಬಂದುದರಿಂದ ಅಡಿಗೆ ಮಾಡುವವರಿಗೂ, ಎಡೆ ಮಾಡುವ ಕಾರ್ಯಕರ್ತರಿಗೂ ಗಲಿಬಿಲಿ ಉಂಟಾಯಿತಾದರೂ ಅವರು ಸಾವರಿಸಿಕೊಂಡು ಪರಿಸ್ಥಿತಿಯನ್ನು ನಿಭಾಯಿಸಿದರು. ಆದರೆ ಪ್ರಸಾದ ಸಿಗುವಲ್ಲಿ ಅನೇಕರಿಗೆ ತಡವಾಯಿತು. ಮತ್ತೆ ಕೆಲವು ಆತ್ಮೀಯ ಶರಣರು ಊರೊಳಗಿನ ಹೋಟೆಲುಗಳ ಮೊರೆ ಹೊಕ್ಕರು - ಸಾಲಿನಲ್ಲಿ ನಿಲ್ಲಲಾರದೆ. ಕಲ್ಯಾಣದಲ್ಲಿ ಮಹಾಮನೆ ಆವರಣದಲ್ಲಿ ಊಟದ ಪೆಂಡಾಲ್ ವಿಸ್ತರಿಸಲು ಸ್ಥಳವೇ ಇಲ್ಲ. ಕೂಡಲ ಸಂಗಮದಲ್ಲಿ ಆ ಸಮಸ್ಯೆ ಇಲ್ಲ. ಆದ್ದರಿಂದ ಊಟ ಬಡಿಸುವ ಕೌಂಟರು ಜಾಸ್ತಿ ತೆರೆಯಬೇಕು. ಜನರು ಹೆಚ್ಚು ಹೊತ್ತು ಸಾಲುಗಳಲ್ಲಿ ನಿಲ್ಲುವಂತಾಗಬಾರದು. ವಯಸ್ಸಾದವರಿಗೆ ಒಂದು ವಿಶೇಷ ಕೌಂಟರ್ ತೆರೆಯಬೇಕು.

ಸ್ವಯಂ ಸೇವಕರ ಜವಾಬ್ದಾರಿ : ಶರಣ ಮೇಳದ ಘನತೆ ಬೆಳೆಸುತ್ತಿರುವವರು ನಿಷ್ಠಾವಂತ ಕಾರ್ಯಕರ್ತರು. ಅಚ್ಚುಕಟ್ಟಾದ ಪ್ರಸಾದ ವ್ಯವಸ್ಥೆಗೆ ಶರಣ ಮೇಳವು ಹೆಸರಾಗಿದೆ. 26ನೆಯ ಶರಣ ಮೇಳಕ್ಕೆ ಕಾರ್ಯಕರ್ತರ ಪಡೆ ಹಿರಿದಾಗಬೇಕು. ಊಟದ ಕೌಂಟರ್ ಜಾಸ್ತಿ ತೆರೆಯಬೇಕಾದರೆ ಕಾರ್ಯಕರ್ತರ ಸಂಖ್ಯೆ ಹೆಚ್ಚಿರಬೇಕು. ತಮ್ಮ ತಮ್ಮ ಊರೊಳಗಣ ತರುಣರನ್ನು ಹುರಿದುಂಬಿಸಿ ಕರೆತರಬೇಕು.

ಪ್ರಚಾರ : ಶರಣ ಮೇಳದಲ್ಲಿ ಭಾಗಿಯಾದವನು ಪುನೀತನಾಗುವನು. ಎಷ್ಟೇ ಕೆಲಸಗಳಿದ್ದರೂ ಶರಣ ಮೇಳದ ಐದು ದಿನಗಳನ್ನು ಕಾಯ್ದಿರಿಸಿಕೊಳ್ಳಬೇಕೆಂದು ಈಗಿನಿಂದಲೇ ಪ್ರಚಾರ ಶುರು ಮಾಡಬೇಕು. ವಾಲ್ ಪೋಸ್ಟರ್, ಕರಪತ್ರ ತರಿಸಿಕೊಂಡು ಪ್ರಚಾರ ಮಾಡಬೇಕು.

ಕಾಣಿಕೆ ಸಂಗ್ರಹ : ಪ್ರತಿಯೊಬ್ಬರೂ ಶಕ್ತಿ ಮೀರಿ ಸಂಗ್ರಹ ಮಾಡಬೇಕು. ಕಲ್ಯಾಣ ಪರ್ವಕ್ಕೆ ಬೀದರ, ಗುಲಬರ್ಗಾ, ಹೈದರಾಬಾದ್, ಜಹೀರಾಬಾದ್, ಉದಗೀರ್ ಇತ್ಯಾದಿ ಶರಣರು ಶಕ್ತಿ ಮೀರಿ ಕಾಣಿಕೆ ಸಂಗ್ರಹಿಸಿದರು. ಅದೆಲ್ಲವೂ ಖರ್ಚಾಯಿತಲ್ಲದೆ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಬಡ್ಡಿಯ ಮೇಲೆ ಏಳು ಲಕ್ಷ ಸಾಲವನ್ನು (ಗುಲಬರ್ಗಾದಲ್ಲಿ) ಪಡೆಯಲಾಯಿತು. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಶರಣ ಬಂಧುಗಳು ಶಕ್ತಿ ಮೀರಿ ದೇಣಿಗೆ ಸಂಗ್ರಹಕ್ಕೆ ಪ್ರಯತ್ನ ಮಾಡಬೇಕು. ರಸೀತಿ ಪುಸ್ತಕಗಳನ್ನು ಕರಪತ್ರಗಳನ್ನು ಪತ್ರ ಬರೆದು ತರಿಸಿಕೊಳ್ಳಬೇಕು. ಫೋನ್ ಮಾಡಿಯೂ ತರಿಸಿಕೊಳ್ಳಬಹುದು. ಬೆಂಗಳೂರು ಕಾರ್ಯಾಲಯದಿಂದ ಕೆಲವರಿಗೆ ಕಳಿಸಲಾಗುವುದು. ಒಂದು ವೇಳೆ ಕಾರಣಾಂತರದಿಂದ ಕಳಿಸಲು ಮರೆತಿದ್ದರೆ ನೀವಾಗಿ ನೆನಪಿಸಿ ತರಿಸಿಕೊಳ್ಳಬೇಕು. ಶರಣ ಮೇಳವು ಶರಣರಿಂದ, ಶರಣರಿಗಾಗಿ, ಶರಣರೇ ನಡೆಸುವ ಪವಿತ್ರ ಸಮಾವೇಶ ಎಂಬುದು ನೆನಪಿರಲಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಶರಣ ಮೇಳ ಉತ್ಸವ ಸಮಿತಿ
ಬಸವ ಮಂಟಪ, 2035, 20ನೇ ಮುಖ್ಯ ರಸ್ತೆ
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 080-23131476, 22923736, 9448137508




ಮಾತಾಜಿಯವರ ವಯೋವೃದ್ಧ ತಾಯಿ ಪೂಜ್ಯ ಗಂಗಮ್ಮಜ್ಜಿ ಅವರಿಂದ ಜ್ಯೋತಿಯ ಉದ್ದೀಪನೆ



ಶ್ರೀ ಯಡಿಯೂರಪ್ಪನವರಿಂದ ಧರ್ಮಚಿಂತನ ಗೋಷ್ಠಿಯ ಉದ್ಘಾಟನೆ



ಶರಣ. ಇ. ಕೃಷ್ಣಪ್ಪನವರು ಪೂಜ್ಯ ಮಾತಾಜಿಯವರಿಗೆ ನೀಡಿದ "ಬಸವ ಕಾಯಕ ರತ್ನ" ಪ್ರಶಸ್ತಿಯೊಂದಿಗೆ 1 ಲಕ್ಷ ರೂ ನಿಧಿಯನ್ನು ಯಡಿಯೂರಪ್ಪ ಮತ್ತು ಶೋಭಾ ಕರಂದ್ಲಾಜೆ ಅರ್ಪಿಸುತ್ತಿರುವುದು



CPMG/KA/BGW/50/20 ... 14, RNI ... MBC Bangalore GP...
... licenced to post without prepayment wpp-17,
Pages 32+4(Cover pages)

Combined Issue of October-November 2012